



E-Bengaluru Beragu

# ಈ–ಬೆಂಗಳೂರು ಬೆರಗು

MAG (2) PRB/CR/36/24-25
T/KN2024/2076

ಸಂಪುಟ: 2 Vol: 2 ಸಂಚಿಕೆ: 4 Issue: 4 ಆಗಸ್ಟ್ 01 - 15 ಪುಟಗಳು: 12 Pages: 12 ಬೆಲೆ: 15.00 ರೂ.

## ಮುಂಗಾರು ಮಳೆ ಉಕ್ಕಿ ಹರಿಯುತ್ತಿರುವ ರಾಜ್ಯದ ಎಲ್ಲಾ ನದಿಗಳು



## ದೇವನಹಳ್ಳಿ ಭೂಸ್ವಾಧೀನ ರದ್ದು: ರೈತರಿಗೆ ಸಂದ ಜಯ






## ಉಪನಗರಗಳ ವರ್ತುಲ ರಸ್ತೆ: ಸರ್ಕಾರದ ಮೀನಾಮೇಷ




## ಭಾರತ–ಇಂಗ್ಲೆಂಡ್ ಸರಣಿ ರೋಚಕ ಅಂತ್ಯ







| | | | | |
|---|---|---|---|---|
| 1. ಪತ್ರಿಕಾ ಸುದ್ದಿ | 2. ಬೆರಗು ಚುಂಬಕ | 3. ಜ್ಞಾನ–ವಿಜ್ಞಾನ–ಪರಿಜ್ಞಾನ | 4. ಮಾಧ್ಯಮ ಸುದ್ದಿ | 5. ಆಡಳಿತ ಸುದ್ದಿ |
| 6. ಸಂಗೀತ ಸಮಾರಂಭ | 7. ಸಭೆ ಸಾಹಿತ್ಯ ಕವನ | 8. ಹಣಕಾಸು ವ್ಯಾಪಾರ | 9. ಆರೋಗ್ಯ ಮತ್ತು ವೈದ್ಯಕೀಯ | 10. ಇತಿಹಾಸ ಪುಟಗಳಿಂದ |
| 11. ಜಾಲತಾಣ ಬೆರಗು | 12. ಯೂಟ್ಯೂಬ್ ಲೋಕ | 13. ಸಿನಿಮಾ ರಂಗ | 14. ಕ್ರೀಡಾರಂಗ | 15. ಸಂಪಾದಕರ ಪುಟ |



## ಮುನ್ನುಡಿ

ವಿಶಾಲ ಕರ್ನಾಟಕದ ಕನ್ನಡ ಓದುಗ ಅಭಿಮಾನಿಗಳಲ್ಲಿ ವಿನಂತಿಯ ಬಿನ್ನಹ..........

ಕನ್ನಡ ನಾಡಿನ ಸಹೃದಯ ಅಕ್ಷರ ಮಿತ್ರರ ಪ್ರೇರೇಪಣೆಯಿಂದ ಉದಯವಾಗಿ ಅತ್ಯಂತ ಸ್ಪರ್ಧಾತ್ಮಕ ಮುದ್ರಣ ಪ್ರಪಂಚ/ಜಾಲತಾಣ ಮಾಧ್ಯಮದಲ್ಲಿ ಶ್ರಮವಹಿಸಿ ಹೊರತರುತ್ತಿರುವ ನಮ್ಮ ಈ ಪ್ರಯತ್ನ ಯಶಸ್ವಿಯಾಗಲು ಉತ್ಸಾಹಿ ಹೃದಯಗಳಲ್ಲಿ ಈ ಬೆಂಗಳೂರು ಬೆರಗು ಪಾಕ್ಷಿಕ ಪತ್ರಿಕೆಯನ್ನು ಪ್ರೋತ್ಸಾಹಿಸುವಂತೆ **'ಈ ಬೆಂಗಳೂರು ಬೆರಗು'** ತಂಡದ ಪರವಾಗಿ ಕೋರುತ್ತೇವೆ.

ದಿನದ, ವಾರದ, ತಿಂಗಳ ಟ್ಯಾಬ್‌ಲಾಡ್ ಸರಳಿ ಪ್ರಚುರವಾಗಿ ಮಾರುಕಟ್ಟೆಯಲ್ಲಿ ಬಿಡುಗಡೆಯಾಗುತ್ತಿರುವ ಈ ಕಠಿಣ ಸಮಯದಲ್ಲಿ, ಪ್ರತಿ ತಿಂಗಳಲ್ಲಿ ಎರಡು ಪಾಕ್ಷಿಕಗಳನ್ನು ನಿಖರವಾಗಿ ಹದಿನೈದನೇ ದಿನವೇ ಅಂದರೆ ಪ್ರತಿ ತಿಂಗಳು 1ನೇ ದಿನಾಂಕ ಹಾಗೂ 16ನೇ ದಿನಾಂಕದಿಂದ ಬಿಡುಗಡೆ ಮಾಡಲು ಸಿದ್ಧಪಡಿಸಿ ತಮ್ಮ ಮುಂದಿಡಲೂ ಪ್ರಯತ್ನಿಸಲಾಗುವುದು.

ಈ ಸಮಕಾಲೀನ ಮುಕ್ಕಾಲು ಪಾಲು ಟ್ಯಾಬ್‌ಲಾಡ್‌ಗಳಲ್ಲಿ ಸಂಚಲನಾತ್ಮಕ ಸುದ್ದಿಗೆ, ಕೊಲೆ, ರಾಜಕೀಯ ವೈಷಮ್ಯ ಹೊಡೆಬಡೆದಾಟಗಳ ದಾಟಿಯಲ್ಲಿ ಬರಹ ಮತ್ತು ಲೇಖನಗಳಿಗೆ ಆದ್ಯತೆ ನೀಡಿ ರಂಗು ರಂಗಾದ ವಿಷಯಗಳನ್ನು ಮುದ್ರಿಸಿ ಸ್ಪರ್ಧೆ ಏರ್ಪಟ್ಟಿರುವ ಮಾರುಕಟ್ಟೆಯಲ್ಲಿ ಗಮನ ಸೆಳೆಯಲು ಇದಕ್ಕೆ ಭಿನ್ನವಾಗಿ ನಮ್ಮ ಈ ಬೆಂಗಳೂರು ಬೆರಗು ಹೊರತರಲು ಪ್ರಯತ್ನಿಸುತ್ತಿದ್ದೇವೆ.

ಆದರೆ ನಮ್ಮ ಈ ಪಾಕ್ಷಿಕ ಸಾಧ್ಯವಾದ ಮಟ್ಟಿಗೆ ಅಂತಹ ಸಂಚಲನ, ಕ್ರೈಂ, ಸೆಕ್ಸ್ ಉನ್ಮಾದ ವಿಷಯಗಳ ಆದ್ಯತೆ ನೀಡದೆ ಪ್ರಕೃತಿ, ಪ್ರೇಮ, ಸಾಹಿತ್ಯ–ಸಂಗೀತ ಲೇಖನ ಹಾಗೂ ಚಿತ್ರಗಳಿಗೆ ಆದ್ಯತೆ ನೀಡಿ ಪ್ರಚಾರ ಮಾಡಲು ಪ್ರಯತ್ನಿಸುತ್ತೇವೆ. ಈ ಪ್ರಯತ್ನಕ್ಕೆ ಸುವಿಶಾಲ ಬೆಂಗಳೂರು ಮತ್ತು ಸಹೃದಯ ಕನ್ನಡ ಓದುಗರ ಪ್ರೀತಿ, ವಿಶ್ವಾಸ, ಪ್ರೋತ್ಸಾಹ ಹಾಗೂ ಆರ್ಶೀವಾದಗಳ ಸದಾ ನಮ್ಮ ಮೇಲಿರಲಿ ಎಂದು ಬಯಸುತ್ತಾ.

ಸದಾ ನಿಮ್ಮ ಸೇವೆಯಲ್ಲಿ
**ಸಂಪಾದಕರ ಸಲಹಾ ಮಂಡಳಿ**

# ಜಿಯೊ 6ಜಿ ತಂತ್ರಜ್ಞಾನದತ್ತ ದಾಪುಗಾಲು




**ಹಾ**ಲಿ ಜಾಲತಾಣ ನಿರ್ವಹಣೆಯಲ್ಲಿ 5ಜಿ ತಂತ್ರಜ್ಞಾನ ಅಳವಡಿಕೆಯಿಂದ ವೇಗದ ಇಂಟರ್‌ನೆಟ್ ಸೌಲಭ್ಯ ಒದಗಿಸುತ್ತಿರುವ ಜಿಯೋ ಕಂಪನಿಯು ಮೊಬೈಲ್ ಇಂಟರ್‌ನೆಟ್ ಡೇಟಾ ಸೇವೆ ಒದಗಿಸುವ ಅತಿದೊಡ್ಡ ಕಂಪನಿಯಾಗಿದ್ದು, 17ಕ್ಕೂ ಹೆಚ್ಚು ಎಕ್ಸಾಬೈಟ್‌ನಷ್ಟು ಡೇಟಾವನ್ನು ಪ್ರತಿ ಮಾಸಿಕವೂ ವ್ಯಾಪಾರ ನಿರ್ವಹಿಸುತ್ತಿದೆ. ಭಾರತದಲ್ಲಿ ವಯರ್‌ಲೆಸ್ ಡೇಟಾ ಬಳಕೆಯಲ್ಲಿ ಶೇ. 60 ರಷ್ಟು ಜಿಯೊ ಕಂಪನಿ ಮೂಲಕ ಆಗುತ್ತಿದೆ. ದೂರಸಂಪರ್ಕ ಸೇವಾ ಕಂಪನಿ ಜಿಯೊ ಒಂದು ಹೆಜ್ಜೆ ಮುಂದೆ ಇಟ್ಟು 6ಜಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವತ್ತ ಕಂಪನಿಯು ಭವಿಷ್ಯದ ಸಂವಹನ ತಂತ್ರಜ್ಞಾನವನ್ನು ತನ್ನದಾಗಿಸಿಕೊಳ್ಳಲು 6ಜಿ ತಂತ್ರಜ್ಞಾನದ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದೆ ಎಂದು ತನ್ನ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಹೇಳಲಾಗುತ್ತಿದೆ.

2016ರಲ್ಲಿ 4ಜಿ, 2018ರಲ್ಲಿ ಮನೆಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ, 2022ರಲ್ಲಿ 5ಜಿ ಮತ್ತು 2024ರಲ್ಲಿ ವಯರ್‌ಲೆಸ್ ಬ್ರಾಡ್‌ಬ್ಯಾಂಡ್ ಸಂಪರ್ಕ ಸೇವೆಯನ್ನು ಕಂಪನಿ ಆರಂಭಿಸಿದ್ದು, ಮುಂದುವರೆದು ಕಂಪನಿಯು ತನ್ನದೇ ಆದ ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇವೆ ಮತ್ತು ಸಂವಹನ ವ್ಯವಸ್ಥೆ ಆರಂಭಿಸಲು ಪ್ರಯತ್ನಪಡುತ್ತಿದ್ದು, ಇಲಾನ್‌ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಜೊತೆ ಪಾಲುದಾರಿಕೆ ಮಾಡಿಕೊಳ್ಳುವ ಮೂಲಕ ಭಾರತದಲ್ಲಿನ ತನ್ನ ಗ್ರಾಹಕರಿಗೆ ಈ ಸೇವೆ ಒದಗಿಸಲು ನಿರ್ಧರಿಸಿದೆ.

2025ರ ಮಾರ್ಚ್ ವೇಳೆಗೆ ಕಂಪನಿಯು 19.1 ಕೋಟಿ 5 ಜಿ ಬಳಕೆದಾರರನ್ನು ಹೊಂದಿರುವ ಜಿಯೋ ತನ್ನ ಮುಂದಿನ 6ಜಿ ತಂತ್ರಜ್ಞಾನವನ್ನು 2026ರೊಳಗೆ ಅಭಿವೃದ್ಧಿಪಡಿಸಿ ಅಳವಡಿಸಿದ್ದಲ್ಲಿ ಇದು ಎಷ್ಟರ ಮಟ್ಟಿಗೆ ಯಶಸ್ಸು ಕಾಣುತ್ತದೆ ಎಂಬುದು ಕಾದು ನೋಡಬೇಕಿದೆ.



ಈ ಬೆಂಗಳೂರು ಬೆರಗು ಪತ್ರಿಕೆ ವಿಭಾಗಕ್ಕೆ ಲೇಖನಗಳು, ವ್ಯಕ್ತಿಪರಿಚಯ, ಪುಸ್ತಕ ವಿಮರ್ಶೆ, ಸಿನಿಮಾ ವಿಮರ್ಶೆ, ನಾಟಕ ವಿಮರ್ಶೆ, ಕವನ, ಸಾಮಾಜಿಕ ಪ್ರತಿಕ್ರಿಯೆ, ಸಂಪಾದಕರಿಗೆ ಪತ್ರ, ದೂರು–ದುಮ್ಮಾನ ಮೊದಲಾದ ವಿಷಯ ವೈವಿಧ್ಯಗಳನ್ನು ಚಿಕ್ಕ ಮತ್ತು ಚೊಕ್ಕವಾಗಿ 1000 ಪದಗಳು ಮೀರದಂತೆ ಕಳುಹಿಸಲು ಈ ಕೆಳಗಿನ ಇ–ಮೇಲ್ ವಿಳಾಸವನ್ನು ಬಳಸಿ ಸಲ್ಲಿಸಬಹುದಾಗಿರುತ್ತದೆ.

**ಕಥೆ–ಕವನ ಕಳುಹಿಸುವ ಮುನ್ನ**

* ಸ್ಪರ್ಧೆಗೆ ಕಳುಹಿಸುವ ಕಥೆ, ಕವನಗಳು ಸ್ವತಂತ್ರ ರಚನೆ ಆಗಿರಬೇಕು. ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ, ಅಂತರ್ಜಾಲ ಸೇರಿದಂತೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು.
* ಕಥೆಗೆ ಗರಿಷ್ಠ ಮಿತಿ–ಎರಡು ಸಾವಿರ ಪದಗಳು.
* ಕಥೆ–ಕವನಗಳು ಯೂನಿಕೋಡ್‌ನಲ್ಲಿ ಇರಬೇಕು.
* ಕಥೆ/ಕವನ ಇರುವ ಪುಟದಲ್ಲಿ ಹೆಸರು, ವಿವರ ಬರೆಯುವಂತಿಲ್ಲ. ಪ್ರತ್ಯೇಕ ಪುಟದಲ್ಲಿ ಹೆಸರು, ಅಂಚೆ ವಿಳಾಸ, ಫೋನ್ ನಂಬರ್, ಇ–ಮೇಲ್ ವಿಳಾಸ ಒದಗಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ವರ್ಣಮಯ ಭಾವಚಿತ್ರದೊಂದಿಗೆ 80 ಪದ ಮೀರದಂತೆ ಕಿರು ಪರಿಚಯವನ್ನೂ ಜೊತೆಗೆ ಕಳುಹಿಸಬೇಕು.
* ಅಂಚೆ ಮೂಲಕ ಕಳುಹಿಸುವವರು ಪ್ರವೇಶಗಳ ಲಕೋಟೆಯ ಮೇಲೆ ಸ್ಪರ್ಧೆಯ ವಿಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು.
* ಕಳುಹಿಸಿರುವ ರಚನೆಗಳನ್ನು ಹಿಂದಿರುಗಿಸುವುದಿಲ್ಲ.
* ಸಂಪಾದಕರ ತೀರ್ಮಾನವೇ ಅಂತಿಮ.

ಇ–ಮೇಲ್ ವಿಳಾಸ : ebbvijay@gmail.com

**ಇ–ಬೆಂಗಳೂರು ಬೆರಗು ವಿಳಾಸ:** ಇ–ಬೆಂಗಳೂರು ಬೆರಗು, ಕೇರಾಫ್ ಚನ್ನಮ್ಮ ಅಸೋಸಿಯೇಟ್ಸ್, ನಂ.1303, ನೆಲಮಹಡಿ, 4ನೇ ಕ್ರಾಸ್, ಅಶೋಕ್ ನಗರ, ಬಿಎಸ್‌ಕೆ 1ನೇ ಹಂತ, ಕತ್ರಿಗುಪ್ಪೆ/ವಿದ್ಯಾಪೀಠ ಮುಖ್ಯರಸ್ತೆ, ಬೆಂಗಳೂರು–560 050.

EBB Office # 1303, Ground Floor, 4th Cross, Ashok Nagar, BSK 1st Stage, Kathriguppe/Vidyapeeta Main Road, Bengaluru-560 050.

# ಬೃಹತ್ ಬೆಂಗಳೂರು 5 ಮಹಾನಗರ ಪಾಲಿಕೆಗಳಾಗಿ ತುಂಡು ತುಂಡು

## ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ಚರ್ಚೆ: ಅಕ್ಟೋಬರ್‌ನಿಂದ ಡಿಸೆಂಬರ್ ಒಳಗೆ ಚುನಾವಣೆ ನಿರೀಕ್ಷೆ



**ಬೃ**ಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಸರ್ಜಿಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಗೆ ತೀರ್ಮಾನ ತೆಗೆದುಕೊಂಡಿರುವ ರಾಜ್ಯ ಸರಕಾರ ಇದೀಗ ಅಂತಿಮವಾಗಿ ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ 5 ಮಹಾನಗರ ಪಾಲಿಕೆಗಳನ್ನು ರಚಿಸಲು ಬಹುತೇಕ ಅಂತಿಮ ತೀರ್ಮಾನ ತೆಗೆದುಕೊಂಡಿದೆ ಎಂದು ತಿಳಿದುಬಂದಿದೆ. ಈ ಸಂಬಂಧ ಸರ್ಕಾರದ ನಗರಾಭಿವೃದ್ಧಿ ಇಲಾಖೆಯು 19.07.2025 ರಂದು ಗೆಜೆಟ್ ಅಧಿಸೂಚನೆ ಹೊರಡಿಸಿ ಸಾರ್ವಜನಿಕರು ಮತ್ತು ಸಂಘಸಂಸ್ಥೆಗಳಿಂದ ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳನ್ನು ನೀಡಲು ಆಹ್ವಾನಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ಜುಲೈ 17ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಬೆಂಗಳೂರು ನಗರಾಭಿವೃದ್ಧಿ ಇಲಾಖೆ ಸಲ್ಲಿಸಿದ್ದ ಪ್ರಸ್ತಾವ ಕುರಿತು ಚರ್ಚೆ ನಡೆದಿದೆ. ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024ರ ಅಡಿಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊಸ 5 ಮಹಾನಗರ ಪಾಲಿಕೆಗಳು ಶೀಘ್ರದಲ್ಲೇ ಅಸ್ತಿತ್ವಕ್ಕೆ ಬರಲಿವೆ ಎಂದು ಮೂಲಗಳು ತಿಳಿಸಿವೆ. 5 ಮಹಾನಗರ ಪಾಲಿಕೆಗಳು ರಚನೆಯಾಗಲಿವೆ. ಮೂಲಗಳ ಪ್ರಕಾರ, ಬರುವ ಅಕ್ಟೋಬರ್‌ನಿಂದ ಡಿಸೆಂಬರ್ ಒಳಗೆ ಹೊಸ 5 ಮಹಾನಗರ ಪಾಲಿಕೆಗಳಿಗೆ ಚುನಾವಣೆ ನಡೆಯುವ ನಿರೀಕ್ಷೆ ಇದೆ. ಅದಕ್ಕೂ ಮೊದಲು 5 ಪಾಲಿಕೆಗಳಿಗೆ ಗಡಿಗಳ ಗುರುತು ಮಾಡಲಾಗಿದ್ದು ವಾರ್ಡ್‌ಗಳ ಸಂಖ್ಯೆ, ಮತದಾರರ ವಿಗಂಡಣೆ, ವಾರ್ಡ್‌ಗಳ ಮೀಸಲಾತಿ ನಿಗದಿ ಮತ್ತಿತರ ಕಾರ್ಯಗಳು ಪೂರ್ಣಗೊಳ್ಳ ಬೇಕಿದೆ.

ಸರ್ಕಾರದ ಮೂಲಗಳ ಪ್ರಕಾರ, ಪ್ರತಿ ಮಹಾನಗರ ಪಾಲಿಕೆಯು 100 ರಿಂದ 125 ವಾರ್ಡ್‌ಗಳನ್ನು ಒಳಗೊಂಡು ಮೇಯರ್, ಉಪ ಮೇಯರ್ ಹೊಂದಲಿದೆ. ಇವರ ಅವಧಿ 30 ತಿಂಗಳು ನಿಗದಿಗೊಳ್ಳುವ ಸಾಧ್ಯತೆ ಇದೆ.

**ಗ್ರೇಟರ್ ಬೆಂಗಳೂರು ನಡೆದು ಬಂದ ಹಾದಿ**

* 22 ಸೆಪ್ಟೆಂಬರ್ 2014 : ಬಿಬಿಎಂಪಿ ವಿಭಜನೆಗೆ ವರದಿ ಸಲ್ಲಿಸಲು ನಿವೃತ್ತ ಮುಖ್ಯ. ಕಾರ್ಯದರ್ಶಿ ಬಿ.ಎಸ್. ಪಾಟೀಲ್ ನೇತೃತ್ವದ ತಜ್ಞರ ಸಮಿತಿ ರಚನೆ.

* 12 ಜೂನ್ 2023 ಬಿಬಿಎಂಪಿ ವಿಭಜನೆಗೆ ವರದಿ ಸಲ್ಲಿಸಲು ರಚಿಸಲಾಗಿದ್ದ ತಜ್ಞರ ಸಮಿತಿಯ ಪುನರ್ ರಚನೆ.

* 18 ಜುಲೈ 2023 ತಜ್ಞರ ಸಮಿತಿ ಮತ್ತೊಮ್ಮೆ ಪುನರ್ ರಚಿಸಿ ಬಿಬಿಎಂಪಿ ಸುಧಾರಣಾ ಸಮಿತಿಯ (ಬ್ರಾಂಡ್ ಬೆಂಗಳೂರು ಸಮಿತಿ) ಎಂದು ನಾಮಕರಣ.

* 8 ಜುಲೈ 2024 : ಬಿಬಿಎಂಪಿ ಸುಧಾರಣಾ ಸಮಿತಿಯಿಂದ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024'ರ ಕರಡು ಸರ್ಕಾರಕ್ಕೆ ಸಲ್ಲಿಕೆ.

* 22 ಜುಲೈ 2024 : ಮೂರು ಹಂತದಲ್ಲಿ ಹೊಸ ಆಡಳಿತ ವ್ಯವಸ್ಥೆ ಕಲ್ಪಿಸುವ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024'ಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ.

* 23 ಜುಲೈ 2024 : ವಿಧಾನಸಭೆಯಲ್ಲಿ ಮಸೂದೆ ಮಂಡನೆ.

* 25 ಜುಲೈ 2024 : ವಿರೋಧ ಪಕ್ಷಗಳ ಆಗ್ರಹದಂತೆ ಮಸೂದೆ ಪರಿಶೀಲನೆಗೆ ಜಂಟಿ ಸದನ ಸಮಿತಿ ರಚನೆಗೆ ಒಪ್ಪಿಗೆ.

* 22 ಆಗಸ್ಟ್ 2024 : ಶಾಸಕ ರಿಹ್ವಾನ್ ಅರ್ಷದ್ ನೇತೃತ್ವದಲ್ಲಿ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿ ರಚನೆ.

* 21 ಫೆಬ್ರವರಿ 2025; ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿಯಿಂದ ಸ್ಪೀಕರ್ ಅವರಿಗೆ ಪರಿಶೀಲನಾ ವರದಿ ಸಲ್ಲಿಕೆ.

* 5 ಮಾರ್ಚ್ 2025 : ಪರಿಶೀಲನಾ ಸಮಿತಿ ಶಿಫಾರಸ್ಸಿನಂತೆ ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024 ವಿಧಾನಸಭೆಯಲ್ಲಿ ಮಂಡನೆ.

* 10 ಮಾರ್ಚ್ 2025 : ಮಸೂದೆಗೆ ವಿಧಾನಸಭೆಯಲ್ಲಿ ಅಂಗೀಕಾರ.

* 12 ಮಾರ್ಚ್ 2025 ಕೆಲವು ತಿದ್ದುಪಡಿಗಳೊಂದಿಗೆ ವಿಧಾನ ಪರಿಷತ್‌ನಲ್ಲಿ ಮಸೂದೆಗೆ ಒಪ್ಪಿಗೆ.

* 13 ಮಾರ್ಚ್ 2025 : ತಿದ್ದುಪಡಿಗಳೊಂದಿಗೆ ವಿಧಾನಸಭೆಯಲ್ಲಿ ಮತ್ತೊಮ್ಮೆ ಅಂಗೀಕಾರ.

* 17 ಮಾರ್ಚ್ 2025 : ಮಸೂದೆಗೆ ರಾಜ್ಯಪಾಲರ ಅಂಕಿತಕ್ಕಾಗಿ ರಾಜಭವನಕ್ಕೆ ರವಾನೆ.

* 25 ಮಾರ್ಚ್ 2025 : ಕೆಲವು ಸ್ಪಷ್ಟನೆ ಕೋರಿ ರಾಜ್ಯಪಾಲರಿಂದ ಮಸೂದೆ ವಾಪಸ್.

* 24 ಏಪ್ರಿಲ್ 2025 : ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ 2024ಗೆ ರಾಜ್ಯಪಾಲರ ಅಂಕಿತ.

* 17 ಜುಲೈ 2025 : ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ 5 ಪಾಲಿಕೆಗೆ ರಚನೆಗೆ ಸಚಿವ ಸಂಪುಟ ಸಭೆ ಅಸ್ತು.

* 19 ಜುಲೈ 2025 : ಗ್ರೇಟರ್ ಬೆಂಗಳೂರು ಐದು ಪಾಲಿಕೆಯಾಗಿ ವಿಂಗಡಿಸಿ ಸರ್ಕಾರದ ಅಧಿಸೂಚನೆ ಹೊರಡಿಸಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿದೆ.

ಬೆಂಗಳೂರು ಉತ್ತರ ಮಹಾನಗರ ಪಾಲಿಕೆ (ಹಳೆ ಬಿಬಿಎಂಪಿ ವ್ಯಾಪ್ತಿಯೊಳಗೆ)

ಬೆಂಗಳೂರು ದಕ್ಷಿಣ ಮಹಾನಗರ ಪಾಲಿಕೆ (ಹಳೆ ಬಿಬಿಎಂಪಿ ವ್ಯಾಪ್ತಿಯೊಳಗೆ)

ಬೆಂಗಳೂರು ಕೇಂದ್ರ ಮಹಾನಗರ ಪಾಲಿಕೆ (ಹಳೆ ಬಿಬಿಎಂಪಿ ವ್ಯಾಪ್ತಿಯೊಳಗೆ)

ಬೆಂಗಳೂರು ಪೂರ್ವ ಮಹಾನಗರ ಪಾಲಿಕೆ (ಹಳೆ ಬಿಬಿಎಂಪಿ ವ್ಯಾಪ್ತಿಯೊಳಗೆ)

ಬೆಂಗಳೂರು ಪಶ್ಚಿಮ ಮಹಾನಗರ ಪಾಲಿಕೆ (ಹಳೆ ಬಿಬಿಎಂಪಿ ವ್ಯಾಪ್ತಿಯೊಳಗೆ)

# ಹೆಬ್ಬಾಳ ಜಂಕ್ಷನ್‌ನಲ್ಲಿ ಶೀಘ್ರ ಇನ್ನೊಂದು ಹೊಸ ಪಥ

## ನಾಗವಾರ ಕಡೆಯಿಂದ ಹೆಬ್ಬಾಳ ಜಂಕ್ಷನ್ ಫ್ಲೈಓವರ್ ನಿರ್ಮಾಣ: ಸಂಚಾರ ದಟ್ಟಣೆ ನಿವಾರಣೆಗೆ ಕ್ರಮ

**ಹೆ**ಬ್ಬಾಳ ಜಂಕ್ಷನ್‌ನಲ್ಲಿ ನಾಗವಾರ ಕಡೆಯಿಂದ ಮತ್ತೊಂದು ಹೊಸ ಮೇಲ್ಸೇತುವೆ (ಹೊಸಪಥ) ನಿರ್ಮಿಸಲು ಬಿಡಿಎ ಮುಂದಾಗಿದ್ದು, ಇದು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎ) ಕಡೆಗೆ ಸಂಚಾರವನ್ನು ಸುಗಮಗೊಳಿಸುವ ಉದ್ದೇಶವನ್ನು ಹೊಂದಿದೆ. ನಾಗವಾರದ ಮೂಲಕ ವಿಮಾನ ನಿಲ್ದಾಣಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿಗೆ ನೇರವಾಗಿ ಸಂಪರ್ಕಿಸುವ ಪ್ರಸ್ತಾವಿತ ಮೇಲ್ಸೇತುವೆಯ ಯೋಜನಾ ವರದಿ (ಡಿಪಿಆರ್) ತಯಾರಿಸಲು ಅನುಮತಿ ಈಗಾಗಲೇ ದೊರೆತಿದ್ದು, ಈ ಪ್ರದೇಶದಲ್ಲಿ ಹೆಚ್ಚುತ್ತಿರುವ ವಾಹನ ಸಾಂದ್ರತೆ ತಗ್ಗಿಸಲು ಈ ಯೋಜನೆ ಅನುಕೂಲವಾಗಬಹುದು ಎಂದು ಅಂದಾಜಿಸಲಾಗಿದೆ.

ಹೆಬ್ಬಾಳ ಜಂಕ್ಷನ್‌ನಲ್ಲಿನ ಸಂಚಾರ ದಟ್ಟಣೆ ಪರಿಹರಿಸಲು ಬಿಡಿಎ 2019ರಲ್ಲಿ ಮೇಲ್ಸೇತುವೆ ಯೋಜನೆ ರೂಪಿಸಿ 25 ಕೋಟಿ ರೂ. ವೆಚ್ಚದಲ್ಲಿ 11 ಬೃಹತ್ ಕಂಬಗಳನ್ನು ನಿರ್ಮಿಸಿತ್ತು. ಆದರೆ, ಯೋಜಿತ ರ್‍ಯಾಂಪ್ ಜೋಡಣೆಯು ಭವಿಷ್ಯದ ಮೆಟ್ರೋ ಮಾರ್ಗಗಳಿಗೆ ಅಡ್ಡಿಪಡಿಸುತ್ತದೆ ಎಂದು ಬೆಂಗಳೂರು ಮೆಟ್ರೋ ರೈಲು ನಿಗಮ ಲಿಮಿಟೆಡ್ (ಬಿಎಂಆರ್‌ಸಿಎಲ್) ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಅಂದು ರ್‍ಯಾಂಪ್ ಯೋಜನೆಯನ್ನು ಕೈಬಿಡಲಾಗಿತ್ತು. ಇದರಿಂದ ಜಂಕ್ಷನ್ ಬಳಿಯ ಮರದ ಉದ್ಯಾನವನದೊಳಗೆ ಅಪಾರ ಹಣ ಖರ್ಚು ಮಾಡಿ ನಿರ್ಮಿಸಿದ್ದ ಸಿಮೆಂಟ್ ಕಂಬಗಳು ಹಾಗೆ ಉಳಿದುಕೊಂಡಿವೆ. ಇದೀಗ, ಬಿಎಂಆರ್‌ಸಿಎಲ್ ಆಕ್ಷೇಪಣೆ ಇಲ್ಲದ್ದರಿಂದ ಹೊಸ ಮೇಲ್ಸೇತುವೆ ಯೋಜನೆಗೆ ಹಸಿರು ನಿಶಾನೆ ತೋರಿದೆ. ಈ ಯೋಜನೆಯ ವೆಚ್ಚವನ್ನು ಕಡಿಮೆ ಮಾಡಲು ಮತ್ತು ನಿರ್ಮಾಣದಿಂದ ಉಂಟಾಗುವ ಅಡಚಣೆಯನ್ನು ಕಡಿಮೆ ಮಾಡಲು ಬಿಡಿಎ ಈಗಾಗಲೇ ನಿರ್ಮಿಸಿರುವ ಕಂಬಗಳನ್ನು ಮರುಬಳಕೆ ಮಾಡುವ ಕುರಿತು ಚಿಂತನೆ ನಡೆಸಿದೆ. ಸದ್ಯ ಇರುವ ಕಂಬಗಳನ್ನು ಹೊಸ ಫ್ಲೈಓವರ್‌ನ ವಿನ್ಯಾಸದಲ್ಲಿ ಸುರಕ್ಷಿತವಾಗಿ ಸಂಯೋಜಿಸಬಹುದೇ ಎಂದು ಚರ್ಚೆಯೂ ನಡೆದಿದೆ.

ಹೊಸ ಫ್ಲೈಓವರ್ 700 ಮೀಟರ್ ಉದ್ದವಿರುತ್ತದೆ. ಜತೆಗೆ ನಗರದ ಸಂಚಾರದ ವಿಷಯದಲ್ಲಿ ಪ್ರಮುಖ ಸಂಪರ್ಕ ಕೊಂಡಿ ಆಗಲಿದೆ. ನಾಗವಾರದಿಂದ ತುಮಕೂರು ರಸ್ತೆ, ಮೇಖ್ರೀ ವೃತ್ತ, ಬಿಇಎಲ್ ವೃತ್ತ ಮತ್ತು ಕೆಐಎ ಕಡೆಗೆ ಪ್ರಯಾಣಿಸುವ ಪ್ರಯಾಣಿಕರ ಟ್ರಾಫಿಕ್ ಕಿರಿಕಿರಿ ತಪ್ಪಿಸಲು ಇದು ಪೂರಕವಾಗಲಿದೆ ಎಂಬುದು ಬಿಡಿಎ ಅಭಿಪ್ರಾಯವಾಗಿದೆ. ನಾಗವಾರ ಕಡೆಯಿಂದ ಬರುವ ವಾಹನಗಳ ಸಂಚಾರಕ್ಕೆ



ಪ್ರತ್ಯೇಕ ರ್‍ಯಾಂಪ್ ಇಲ್ಲದಿರುವುದು ವಾಹನ ಸವಾರರಿಗೆ ಒಂದು ಪ್ರಮುಖ ಸಮಸ್ಯೆಯಾಗಿದೆ. ಹೆಬ್ಬಾಳ ಮೇಲ್ಸೇತುವೆಗೆ ನೇರ ಪ್ರವೇಶವಿಲ್ಲದ ಕಾರಣ ಅನೇಕ ಪ್ರಯಾಣಿಕರು ಕೆಂಪಾಪುರದ ವೃತ್ತದ ಮೂಲಕ ಎಸ್ಟೀಮ್ ಮಾಲ್ ಬಳಿಯ ಸರ್ವಿಸ್ ರಸ್ತೆಯನ್ನು ಬಳಸಿ ಮುಖ್ಯ ಮೇಲ್ಸೇತುವೆಗೆ ತಲುಪಬೇಕಾಗುತ್ತದೆ. ಇದು ಪ್ರಯಾಣದ ಸಮಯವನ್ನು ಹೆಚ್ಚಿಸುವುದಲ್ಲದೆ, ಸಂಚಾರ ದಟ್ಟಣೆಗೂ ಕಾರಣವಾಗಿದೆ.

ಹೆಬ್ಬಾಳ ಕೆರೆಯ ಪಕ್ಕದಲ್ಲಿರುವ ರಸ್ತೆಗಳ ವಿಸ್ತರಣೆ ಕಾರ್ಯವನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೈಗೆತ್ತಿಕೊಂಡಿದೆ. ಇದರಿಂದ ಭೂಸ್ವಾಧೀನ ಸೇರಿ ಮತ್ತಿತರ ಅಡೆತಡೆಗಳಿಲ್ಲದೆ ಹೊಸ ಫ್ಲೈಓವರ್‌ನ ಕೆಳಮುಖ ರ್‍ಯಾಂಪ್ ಅನ್ನು ನಿರ್ಮಿಸಬಹುದು ಎನ್ನುತ್ತಾರೆ ಬಿಡಿಎ ಅಧಿಕಾರಿಗಳು. ಮೇಲ್ಸೇತುವೆ ಯೋಜನೆ ಇನ್ನೂ ಆರಂಭಿಕ ಯೋಜನಾ ಹಂತದಲ್ಲಿದ್ದು, ನಿರ್ಮಾಣದ ಸಮಯ ಮತ್ತಿತರ ವಿಷಯಗಳು ಅಂತಿಮಗೊಳ್ಳಬೇಕಿದೆ. ಈಗಾಗಲೇ ನಿರ್ಮಿಸಿ ಕೈಬಿಡಲಾದ ಕಂಬಗಳನ್ನು ಮರುಬಳಕೆ ಮಾಡಿಕೊಂಡರೆ ಕಾಮಗಾರಿ ಮತ್ತಷ್ಟು ತ್ವರಿತಗೊಳಿಸಬಹುದೆ ಎಂಬ ಬಗ್ಗೆ ಮತ್ತು ಕಾಮಗಾರಿಯ ಪ್ರಾರಂಭಿಕ ಹಂತದ ಅನುಮೋದನೆಗಳನ್ನು ಪಡೆಯಲು ಬಿಡಿಎ ಅಧಿಕಾರಿಗಳು ಸಿದ್ಧತೆ ನಡೆಸುತ್ತಿದ್ದಾರೆಂದು ಬಿಡಿಎ ಮೂಲಗಳಿಂದ ತಿಳಿದು ಬಂದಿರುತ್ತದೆ.

# ಮುಂಗಾರು ಮಳೆ: ಉಕ್ಕಿ ಹರಿಯುತ್ತಿರುವ ರಾಜ್ಯದ ಎಲ್ಲಾ ನದಿಗಳು



**ಈ** ವರ್ಷದ ಜೂನ್–ಜುಲೈ ರಣಭೀಕರ ಮುಂಗಾರು ಮಳೆಯಿಂದಾಗಿ ಉಕ್ಕಿ ಹರಿಯುತ್ತಿರುವ ರಾಜ್ಯದ ಎಲ್ಲಾ ನದಿಗಳು ತುಂಬಿ ಹರಿಯುತ್ತಿದ್ದು, ಬಹುತೇಕ ಎಲ್ಲಾ ಅಣೆಕಟ್ಟುಗಳು ತುಂಬಿ ಅಣೆಕಟ್ಟುಗಳಿಂದ ನದಿ ಪಾತ್ರಕ್ಕೆ ನೀರು ಬಿಡುವ ಪರಿಸ್ಥಿತಿ ಉಂಟಾಗಿದೆ. ರಾಜ್ಯದಲ್ಲಿ ಮುಂಗಾರು ಮಳೆ ಅಬ್ಬರ ಮುಂದುವರಿದಿದ್ದು ಹಲವೆಡೆ ಅವಾಂತರಗಳನ್ನು ಸೃಷ್ಟಿಸಿದೆ. ನದಿಗಳು ಉಕ್ಕಿ ಹರಿದಿದ್ದು ಜನಸಂಚಾರಕ್ಕೆ ತೊಂದರೆಯಾಗಿದೆ. ನದಿ ಪಾತ್ರಗಳಲ್ಲಿ ವಾಸಿಸುತ್ತಿರುವ ಗ್ರಾಮಗಳಿಗೆ ಪ್ರವಾಹ ಭೀತಿ ಎದುರಾಗಿದೆ. ಮಲೆನಾಡಲ್ಲಿ ಭೂಕುಸಿತ ಸಂಭವಿಸುತ್ತಿದೆ. ಹಲವು ಜಿಲ್ಲೆಗಳಲ್ಲಿ ಶಾಲೆಗಳಿಗೆ ರಜೆ ಮುಂದುವರಿಸಲಾಗಿದೆ.

ಜುಲೈ 18ರ ನಂತರ ಮುಂಗಾರು ಮಳೆ ಚುರುಕಾಗಿದೆ. ರಾಜ್ಯದ ಹಲವಾರು ಕಡೆಗಳಲ್ಲಿ ಮಳೆಯಾಗುತ್ತಿದೆ. ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದ ಹಲವಾರು ಕಡೆ ಸತತ ಮೂರ್ನಾಲ್ಕು ದಿನಗಳಿಂದ ಮಳೆ ಬೀಳುತ್ತಿರುವುದರಿಂದ ಅಲ್ಲಿನ ಕೆರೆಗಳು, ಹಳ್ಳಕೊಳ್ಳಗಳು ತುಂಬಿವೆ. ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳಿಗೆ ಹೊಂದಿಕೊಂಡಿರುವ ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕದ ಜಿಲ್ಲೆಗಳಲ್ಲಿನ ನದಿಗಳಲ್ಲಿ ಪ್ರವಾಹದ ಪರಿಸ್ಥಿತಿ ಏರ್ಪಟ್ಟಿದೆ. ಕೇವಲ ನಾಲ್ಕು ದಿನಗಳ ಹಿಂದೆ ಇಂಥ ಚಿತ್ರಣವಿರಲಿಲ್ಲ. ಮಳೆ ಕೈಕೊಟ್ಟಿದ್ದ ರಿಂದಾಗಿ ಅಲ್ಲಿ ಬರದ ಛಾಯೆ ಇತ್ತು. ಆದರೆ, ಅದೀಗ ಮೂರೇ ದಿನಗಳಲ್ಲಿ ಮಾಯವಾಗಿದೆ. ಚಿಕ್ಕೋಡಿಯಲ್ಲಿ ಕೃಷ್ಣಾ, ವೇದಗಂಗಾ, ದೂಧ್ ಗಂಗಾ ನದಿಗಳು ಅಬ್ಬರಿಸುತ್ತಿದೆ. ಕರ್ನಾಟಕದ ಗಡಿಯೊಳಗೆ ಕೃಷ್ಣ, ದೂದಗಂಗ, ಮಲಪ್ರಭ, ಘಟಪ್ರಭ ನದಿಗಳು ತುಂಬಿ ಹರಿಯುತ್ತಿದೆ.

ಕರ್ನಾಟಕದ ಕೃಷ್ಣ ನದಿಯಲ್ಲಿ ಹೆಚ್ಚಿದ ಪ್ರವಾಹದಿಂದ ಆಲಮಟ್ಟಿ ಜಲಾಶಯದ ಒಳಹರಿವು ಅಪಾರವಾಗಿ ಹೆಚ್ಚಿದೆ. ಕುಡಿವ ನೀರಿನ ಉದ್ದೇಶಕ್ಕಾಗಿ ಜುಲೈ 18 ರಂದು ಶುಕ್ರವಾರ ಆಲಮಟ್ಟಿ ಜಲಾಶಯದಿಂದ ನದಿ ಪಾತ್ರಕ್ಕೆ ನೀರು ಹರಿಸಲು ಆರಂಭಿಸಲಾಗಿದೆ. ಕುಡಿವ ನೀರಿನ ಉದ್ದೇಶಕ್ಕಾಗಿ ನಾನಾ ಕಾಲುವೆಗಳ ಮೂಲಕ ಕೆರೆಗಳನ್ನು ತುಂಬಿಸುವ ಉದ್ದೇಶದಿಂದ ಕೆಪಿಸಿಎಲ್ ಮೂಲಕ ನಾರಾಯಣಪುರ ಜಲಾಶಯಕ್ಕೆ ನೀರು ಹರಿಸಲಾಗುತ್ತಿದೆ.

ಇನ್ನೂ ಹಾಸನನಗರ ಮತ್ತು ಜಿಲ್ಲಾದ್ಯಂತ ಮುಂಗಾರು ಮಳೆ ಅಬ್ಬರಿಸುತ್ತಿದೆ. ಅದರಲ್ಲೂ ಮಲೆನಾಡು ಭಾಗದಲ್ಲಿ ಭಾರೀ ಮಳೆ ಸುರಿಯುತ್ತಿದ್ದು ನದಿ, ಹಳ್ಳ ಕೊಳ್ಳ ಉಕ್ಕಿ ಹರಿಯುತ್ತಿವೆ. ಸಕಲೇಶಪುರ ತಾಲೂಕಿನ, ದೋನಹಳ್ಳೀಯ ಬೆಣಗಿನಹಳ್ಳ ಉಕ್ಕಿ ಹರಿದು ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. 2018ರಲ್ಲಿ ಭಾರೀ ಮಳೆಗೆ ಕಿರು ಸೇತುವೆ ಕೊಚ್ಚಿಹೋಗಿತ್ತು. ಏಳು ವರ್ಷ ಆದರೂ ಹೊಸ ಸೇತುವೆ ನಿರ್ಮಾಣ ಮಾಡದೆ ನಿರ್ಲಕ್ಷ್ಯ ವಹಿಸಿದ್ದು ಮಳೆ ಹೆಚ್ಚಾದ ಹಿನ್ನೆಲೆ ಬೆಣಗಿನಹಳ್ಳ ಉಕ್ಕಿ ಹರಿಯುತ್ತಿದೆ. ಹಳ್ಳದ ಮತ್ತೊಂದು ಬದಿಯಲ್ಲಿರುವ ಜಮೀನುಗಳಿಗೆ ತೆರಳಲಾಗದೆ ರೈತರು ಪರದಾಡುತ್ತಿದ್ದಾರೆ. ಗ್ರಾ.ಪಂ. ಕಚೇರಿ, ಆಸ್ಪತ್ರೆ, ಮಾರುಕಟ್ಟೆಗೆ ಹತ್ತಾರು ಕಿಮೀ ಸುತ್ತಾಡ ಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ಸೇತುವೆ ನಿರ್ಮಿಸಿ ಕೊಡದ ಅಧಿಕಾರಿಗಳು, ಜನ ಪ್ರತಿನಿಧಿಗಳ ವಿರುದ್ಧ ಜನರು ಆಕ್ರೋಶ ಹೊರ ಹಾಕಿದ್ದಾರೆ.

ಈ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸುರಿದ ಅಕಾಲಿಕ ಮಳೆ ಮತ್ತು ಕಾವೇರಿ ಉಗಮಸ್ಥಾನ ಕೊಡಗಿನ ಪ್ರದೇಶದಲ್ಲಿ ಜೂನ್ ತಿಂಗಳಲ್ಲಿ ಸುರಿದ ಧಾರಾಕಾರ ಮುಂಗಾರು ಮಳೆಯಿಂದಾಗಿ ಜೂನ್ 30ಕ್ಕೆ ಮುಂಚೆಯೇ ಕನ್ನಂಬಾಡಿಯ ಕಾವೇರಿ ಕಟ್ಟೆ ಕೃಷ್ಣರಾಜ ಜಲಸಾಗರವು ತುಂಬಿ ತುಳುಕಿ ಉಕ್ಕಿ ಹರಿದು ತಮಿಳುನಾಡಿನ ಮೆಟ್ಟೂರು ಅಣೆಕಟ್ಟಿನವರೆಗೆ ಮೈದುಂಬಿ ಕಾವೇರಿಯಲ್ಲಿ ಪ್ರವಹಿಸಿದೆ. ಈ ವರ್ಷದ ಈ ಮಳೆ ರೈತರ ಮೊಗದಲ್ಲಿ ಹರ್ಷ ತಂದಿದೆ. ಮುಂಗಾರು ಮಳೆಗೆ ಕರ್ನಾಟಕದ ಜೀವನದಿ ಕಾವೇರಿ ತುಂಬಿ ಹರಿಯುತ್ತಿದ್ದು ಭರ್ಜರಿಯಾಗಿ ಅವಧಿಗೂ ಮುನ್ನವೇ ಕೆಆರ್‌ಎಸ್ ತುಂಬಿದೆ. ಈ ಹಿನ್ನೆಲೆಯಲ್ಲಿ ತುಂಬಿದ ಕಾವೇರಿ ನದಿಗೆ ಮುಖ್ಯಮಂತ್ರಿಯವರು ಸಿಎಂ ಸಿದ್ಧರಾಮಯ್ಯ ಅವರು ಸಂತೋಷ ಮತ್ತು ಸಂಭ್ರಮದಿಂದ ಬಾಗಿನ ಅರ್ಪಿಸಿದ್ದಾರೆ. ಇದೇ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಚಲುವರಾಯಸ್ವಾಮಿಯವರು ಕಾವೇರಿ ಮಾತೆಗೆ ಪೂಜೆ ಸಲ್ಲಿಸಿದ್ದಾರೆ. ಇದೊಂದು ವಿಶೇಷವಾದ ಸಮಾರಂಭ ಮತ್ತು ಅಣೆಕಟ್ಟು ಕಟ್ಟಿ 93 ವರ್ಷಗಳಲ್ಲಿ 76 ಬಾರಿ ಭರ್ತಿಯಾದ ಕೆಆರ್‌ಎಸ್ ಅಣೆಕಟ್ಟು ಜೂನ್ ತಿಂಗಳಲ್ಲೇ ತುಂಬಿದ್ದರಿಂದ ವಿಶೇಷವಾದ ಪೂಜೆಯನ್ನು ಕೂಡಾ ಸಲ್ಲಿಸಿದ್ದಾರೆ.

ಈಗಾಗಲೇ ಮುಂಚಿತವಾಗಿ ಉತ್ತಮ ಮುಂಗಾರು ಪೂರ್ವ ಮಳೆ ಮತ್ತು ನೈಋತ್ಯ ಮಾನ್ಸೂನ್ ಆರಂಭದೊಂದಿಗೆ ಕಬಿನಿ ಅಣೆಕಟ್ಟು ಮೇ ಅಂತ್ಯದ ವೇಳೆಗಾಗಲೆ ತುಂಬಿತ್ತು. ಆದರೆ ಜಲಾಶಯದಿಂದ ಆಗಾಗ ನೀರು ಬಿಡುಗಡೆ ಯಿಂದಾಗಿ ನೀರಿನ ಮಟ್ಟವು ಅದರ ಪೂರ್ಣ ಸಾಮರ್ಥ್ಯವಾದ 2284 ಅಡಿಗಳನ್ನು ಜುಲೈ 19 ರಂದು ತಲುಪಿತ್ತು. ಈ ಪ್ರಯುಕ್ತ ಭಾನುವಾರ ಜುಲೈ 20ರಂದು ಬೆಳಿಗ್ಗೆ 11.17ಕ್ಕೆ ಸಲ್ಲುವ ಶುಭ 'ಕನ್ಯಾ ಲಗ್ನ'ದ ಸಮಯದಲ್ಲಿ ಕೃತಜ್ಞತಾ ಸೂಚಕವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರು ಮೈಸೂರು ಜಿಲ್ಲೆಯ ಎಚ್‌ಡಿ ಕೋಟೆ ತಾಲ್ಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಅಣೆಕಟ್ಟಿನಲ್ಲಿ ಕಪಿಲಾ ನದಿಗೆ ಬಾಗಿನ ಅರ್ಪಿಸಿ ಪೂಜೆ ಸಲ್ಲಿಸಿದ್ದಾರೆ.

ಕಪಿಲಾ ನದಿಯೂ ನಮ್ಮ ಜೀವನಾಡಿಯಾಗಿದ್ದು "ಕಬಿನಿ ಅಣೆಕಟ್ಟಿನ ಪುನರುದ್ಧೀಕರಣಕ್ಕಾಗಿ ಅಣೆಕಟ್ಟು ಪುನರ್ವಸತಿ ಮತ್ತು ಸುಧಾರಣಾ ಯೋಜನೆ (ಆಖಖಕ) ಅಡಿಯಲ್ಲಿ 88 ಕೋಟಿ ರೂ.ಗಳ ಕೆಲಸವನ್ನು ಕೈಗೆತ್ತಿಕೊಳ್ಳಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ, ಅಣೆಕಟ್ಟಿನ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಇನ್ನೂ ಹೆಚ್ಚುವರಿ ಬಂದೋಬಸ್ತಿಗಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದು ಅಂತರ–ರಾಜ್ಯ ನೀರಿನ ವಿವಾದಕ್ಕೆ ಅವಕಾಶ ನೀಡದೆ ತಮಿಳು ನಾಡಿಗೆ ನಮ್ಮ ಪಾಲಿನ ನೀರನ್ನು ಬಿಡುಗಡೆ ಮಾಡಲು ನಮಗೆ ಈ ಅಣೆಕಟ್ಟಿನಿಂದ ಶೇಖರಿಸಿ ಬಿಡುಗಡೆ ಮಾಡಲು ಕಪಿಲೆ ಅಣೆಕಟ್ಟಿನ ನೀರು ಸಹಾಯ ಮಾಡಿದೆ. 2022 ಮತ್ತು 2023ರಲ್ಲಿ ಸಾಕಷ್ಟು ಮಳೆ ಇಲ್ಲದಿದ್ದಾಗ ಹೊರತುಪಡಿಸಿ, ಅಣೆಕಟ್ಟು ಯಾವಾಗಲೂ ತುಂಬಿರುತ್ತದೆ" ಎಂದು ಉಪಮುಖ್ಯಮಂತ್ರಿ ಮತ್ತು ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್‌ರವರು ನೆರೆದಿದ್ದ ಪತ್ರಕರ್ತರಿಗೆ ತಿಳಿಸಿದ್ದಾರೆ.

# ಮಳೆಗಾಲದ ಮುದ ನೀಡುವ ರಾಗಗಳು

ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ, ರಾಗ ಅಹಿರ್ ಭೈರವ್ ಹಿಂದೂಸ್ತಾನಿ ಶಾಸ್ತ್ರೀಯ ರಾಗವಾಗಿದ್ದು, ಇದು ಮನಸ್ಸನ್ನು ಶಾಂತಗೊಳಿಸುವ ಮತ್ತು ಧ್ಯಾನಶೀಲ ಗುಣಗಳಿಗೆ ಹೆಸರುವಾಸಿಯಾಗಿದೆ, ಇದು ಹೆಚ್ಚಾಗಿ ಬೆಳಗಿನ ಸಮಯದೊಂದಿಗೆ ಸಂಬಂಧಿಸಿದ್ದು ಇದನ್ನು ಭೈರವ್ ಮತ್ತು ಅಹಿರಿ (ಅಥವಾ ಅಭಿರಿ) ರಾಗಗಳ ಸಂಯೋಜನೆ ಎಂದು ಪರಿಗಣಿಸಲಾಗುತ್ತದೆ, ಪುರಾಣದಲ್ಲಿ ಉಲ್ಲೇಖಿಸಿದಂತೆ ಶ್ರೀ ಕೃಷ್ಣಪರಮಾತ್ಮನೂ ಸ್ವತಃ ಆಲಾಪಿಸಿದ ಪ್ರಮುಖ ರಾಗವೆ ಅಹಿರ್ ಭೈರವ ರಾಗ.

ಪಂಡಿತ್ ಭೀಮಸೇನ್ ಜೋಷಿಯವರು ಮತ್ತು ಇತ್ತೀಚೆಗೆ ನಿಧನರಾದ ಉಸ್ತಾದ್ ರಶೀದ್ ಖಾನ್ ನಂತರ ಈ ರಾಗವನ್ನು ಹಿಂದೂಸ್ತಾನಿ ಪದ್ದತಿಯಲ್ಲಿ ಹಾಡುವುದರಲ್ಲಿ ಸುಪ್ರಸಿದ್ಧ ರಾಗಿದ್ದರು. ಉತ್ತರ ಭಾರತದ ಹಿಂದೂಸ್ತಾನಿ ಸಂಗೀತ ಬಾಣಿಯಲ್ಲಿ ಮೊದಲ ಐದು ಸ್ಥಾನದಲ್ಲಿ ಇರುವವರು ಕರ್ನಾಟಕದ ಸರಸ್ವತಿ ಪುತ್ರರಾದ ಕುಮಾರ್ ಗಾಂಧರ್ವ, ಮಲ್ಲಿಕಾರ್ಜುನ ಮನ್ಸೂರ್, ಪಂಡಿತ್ ಭೀಮಸೇನ್ ಜೋಶಿ, ಇತ್ತೀಚೆಗೆ ಪಂಡಿತ್ ಪದ್ಮಶ್ರೀ ವೆಂಕಟೇಶ್ ಕುಮಾರ್. ಪಂಡಿತ್ ವೆಂಕಟೇಶ್ ಕುಮಾರ್ ಅವರು ಬಳ್ಳಾರಿ ಜಿಲ್ಲೆಯ ಸೊಂಡೂರು ತಾಲೂಕಿನವರಾಗಿದ್ದು ಮೊದಲು ಅವರ ತಂದೆಯವರ ಜೊತೆಗೆ ಬಯಲಾಟಕ್ಕೆ ಮತ್ತು ಹಿಂಮೇಳಕ್ಕೆ ಬರುತಿದ್ದವರು, ಮುಂದೆ ಗದುಗಿನ ವೀರಾಶ್ರಮ ಪುಟ್ಟರಾಜ ಗವಾಯಿಗಳ ಗರಡಿಯಲ್ಲಿ 12 ವರುಷ ಅಭ್ಯಾಸ ಮಾಡಿ ಹತ್ತು ರಾಗ ಸಿದ್ದಿಸಿಕೊಂಡಿದ್ದರು. ನಂತರ 72 ಮೇಳಕರ್ತ ರಾಗಗಳನ್ನು ಸಂಯೋಜಿಸಿ ಹಿಂದೂಸ್ತಾನಿಯ 50ಕ್ಕೂ ಹೆಚ್ಚು ರಾಗದಲ್ಲಿ 30 ವರ್ಷಗಳಿಂದ ಹಲವಾರು ಪ್ರಯೋಗಗಳನ್ನು ಹಲವಾರು ಕಛೇರಿಗಳಲ್ಲಿ ಸಂಗೀತ ಪ್ರಿಯರಿಗೆ ತಮ್ಮ ರಾಗ ವೈಭವವನ್ನು ಉಣಬಡಿಸಿದ್ದಾರೆ.

ರಾಗ ದೀಪಕ್, ಸಾಂಪ್ರದಾಯಿಕವಾಗಿ ಬೆಂಕಿಯೊಂದಿಗೆ ಸಂಬಂಧ ಹೊಂದಿದ್ದು, ಜ್ವಾಲೆಗಳನ್ನು ಹೊತ್ತಿಸುವ ಶಕ್ತಿಯನ್ನು ಹೊಂದಿದೆ ಎಂದು ಹೇಳಲಾಗುತ್ತದೆ. ಇದನ್ನು ಶಿವನು ಸೃಷ್ಟಿಸಿದ್ದಾನೆಂದು ನಂಬಲಾಗಿದೆ ಮತ್ತು ಇದನ್ನು ಸಾಮಾನ್ಯವಾಗಿ ಸಂಜೆಯ ಆರಂಭದಲ್ಲಿ ಪ್ರದರ್ಶಿಸಲಾಗುತ್ತದೆ. ಸಂಗೀತಗಾರ ತಾನ್ಸೇನ್ ಮತ್ತು ಅವನು ದೀಪಕ್ ರಾಗವನ್ನು ಹೇಗೆ ಹಾಡಿದನು, ಅದು ಉರಿಯುತ್ತಿರುವ ಪ್ರತಿಕ್ರಿಯೆಯನ್ನು ಉಂಟುಮಾಡಿತು ಮತ್ತು ನಂತರ ಅವನ ಮಗಳು ಮಳೆಯನ್ನು ತಂದು ಅವನನ್ನು ತಂಪಾಗಿಸಲು ರಾಗ ಮೇಘ ಮಲ್ಹಾರ್ ಅನ್ನು ಹೇಗೆ ಹಾಡಿದಳು ಎಂಬುದರ ಬಗ್ಗೆ ಒಂದು ಪ್ರಸಿದ್ಧ ದಂತಕಥೆಯಿದೆ.

ಅಕ್ಬರ್ ಸಿನಿಮಾದಲ್ಲಿ ತಾನಸೇನಾ ಪಾತ್ರ ಮಾಡಿದವರು ಕರ್ನಾಟಕದ ಧಾರವಾಡ ಮೂಲದ ಪಂಡಿತ ಕೈವಲ್ಯನಾಥ್ ಅವರ ತಂದೆ. ಅವರ ಮಗ ಸುಪ್ರಸಿದ್ದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರರು.

ದೀಪಕ್ ರಾಗ ಅದರದೇ ಋತುಮಾನ ನಿಭಂದನೆ ಇದೆ. ಬಹುಶ್ಯ ಜುಲೈ ಆಗಸ್ಟ್ ಸೆಪ್ಟೆಂಬರ್ ಅಕ್ಟೋಬರ್ ಋತುಮಾನದ ಹೆಸರು ಅಂದರೆ ಗ್ರೀಷ್ಮ ವರ್ಷ ಋತು ಇರಬೇಕು. ದೀಪಕ್ ರಾಗ ಹಾಡಿದ ಮೇಲೆ ಅಷ್ಟೇ ಸಿದ್ದಿಯಾದ ಸಂಗೀತಗಾರರು ಮೇಘ ಮಂದಾರ ರಾಗ ಹಾಡಿದರೆ ಮಳೆ ಸುರಿದು ದೀಪಕ್ ರಾಗ ಹಾಡಿದವರು ಬದುಕುತ್ತಾರೆ ಎಂಬ ಶಾಸ್ತ್ರ ನಿಯಮ ಇದೆ. ಈಗ ಯಾರೂ ಈ ರಾಗವನ್ನು ಪ್ರಯೋಗ ಮಾಡುವುದಿಲ್ಲ. ಇದು ಅಕ್ಬರ್ ಆಸ್ತಾನದಲ್ಲಿ ನಡೆದಿದೆ ದಾಖಲೆಯೂ ಇದೆ. ಅದೇ ತರಹ ಸಂಧ್ಯಾ ರಾಗ ಅಂದರೆ ಪೂರ್ವ ಕಲ್ಯಾಣಿ ಅದನ್ನು ಹಾಡುವಾಗ ನರ ಬಿಗಿದು ಉಸಿರು ಕಟ್ಟುತ್ತದೆ ಯಾರು ಪೂರ್ಣ ಹಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸನಾದಿ ಅಪ್ಪಣ್ಣ ಸಿನಿಮಾದಲ್ಲಿ "ಕರೆದರೂ ಕೇಳದೆ" ಹಾಡನ್ನು ಕಲ್ಯಾಣ ರಾಗದಲ್ಲಿ ಇನ್ನೊಂದು ರಾಗ ಮಿಶ್ರ ಮಾಡಿಕೊಂಡು ಉಸ್ತಾದ ಬಿಸ್ಮಿಲ್ಲಖಾನ್‌ರವರ ಶಹನಾಯಿ ವಾದ್ಯ ಹಿನ್ನೆಲೆ ಗಾಯಕಿ ಜಾನಕಿಯವರೊಂದಿಗೆ ಹಾಡಿಸಿದರು.

ಮುಂದುವರೆದು ಇದೇ ರೀತಿ ಅಮೃತವರ್ಷಿಣಿ ರಾಗವು ಸಹ ಮಳೆಗಾಲದ ಸವಿನೆನಪಿಗಾಗಿ ಕಡುಬಿಸಿಲಿನ ಬೇಸಿಗೆಯಲ್ಲಿ



ಒಳ್ಳೆಯ ಸಂಗೀತಗಾರರು ಹಾಡಿದರೆ ಮಳೆ ಬರುವ ಅವಕಾಶವಿದೆಯೆಂದು ನಮ್ಮ ಜನ ಮಾನಸದಲ್ಲಿ ಇದೆ. ಇದಕ್ಕೆ ಉದಾಹರಣೆ 1970ರ ದಶಕದಲ್ಲಿ ಬಿಸಿಲಿನ ನಾಡಾದ ಬಳ್ಳಾರಿಯಲ್ಲಿ ನಡೆದ ಡಾ. ಬಾಲಮುರುಳಿ ಕೃಷ್ಣರವರ ಸಂಗೀತ ಕಛೇರಿಯಲ್ಲಿ ಹಾಡಿದ ಅಮೃತವರ್ಷಿಣಿ ರಾಗವು ಅದ್ಭುತವಾಗಿ ಪರಿಣಮಿಸಿದ್ದರಿಂದ ಗುಡುಗು ಸಿಡಿಲಿನ ಸಹಿತ ಧಾರಾಕಾರ ಮಳೆ ಬಂದಿರುವುದು ಈ ಲೇಖಕರ ಅನುಭವಕ್ಕೆ ಬಂದಿರುತ್ತದೆ. ಇದೇ ನಮ್ಮ ಕರ್ನಾಟಕ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ರಸಾನುಭವಗಳ ಮತ್ತು ಮಾಧುರ್ಯಕ್ಕೆ ಹೆಸರುವಾಸಿ.

# ಭೂಸ್ವಾಧೀನ ರದ್ದು ದೇವನಹಳ್ಳಿ ರೈತರ ಪ್ರತಿಭಟನೆಗೆ ಜಯ

## ನೇಗಿಲ ಯೋಗಿಗಳ ಹೋರಾಟಕ್ಕೆ ಮಣಿದ ಸರ್ಕಾರ: ಭೂಸ್ವಾಧೀನ ಕೈ ಬಿಟ್ಟ ರಾಜ್ಯ ಸರ್ಕಾರ

**ದೇ**ವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಹೈಟೆಕ್ ರಕ್ಷಣಾ ಮತ್ತು ವೈಮಾಂತರಿಕ್ಷ ಪಾರ್ಕ್‌ಗಾಗಿ ಜಮೀನು ನೀಡಲು ರೈತರು ಭಾರೀ ಪ್ರತಿಭಟನೆ ನಡೆಸಿ ಅಮರಣಾಂತ ಉಪವಾಸದೊಂದಿಗೆ ವಿರೋಧಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಭೂಸ್ವಾಧೀನ ಕೈ ಬಿಡಲು ನಿರ್ಧರಿಸಿದೆ. ಈ ಮೂಲಕ ಕಳೆದ ಮೂರುವರೆ ವರ್ಷಗಳಿಂದ ನಡೆದಿರುವ ರೈತರ ಹೋರಾಟ ತಾರ್ಕಿಕ ಅಂತ್ಯಕಂಡಿದ್ದು, ಅನ್ನದಾತರ ಆಂದೋಲನಕ್ಕೆ ದೊಡ್ಡ ಗೆಲುವು ಲಭಿಸಿದೆ. ಈ ಹಿನ್ನೆಲೆಯಲ್ಲಿ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಜುಲೈ 15ರಂದು ನಡೆದ ರೈತರ ಜೊತೆಗಿನ ಸಭೆಯಲ್ಲಿ ಭೂಸ್ವಾಧೀನ ಕೈ ಬಿಡಲು ಸರ್ಕಾರ ನಿರ್ಧಾರ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ. ಭೂ ಸ್ವಾಧೀನ ಪ್ರಕ್ರಿಯೆಯನ್ನು ಕೈಬಿಟ್ಟು ತಕ್ಷಣದಿಂದ ಅನ್ವಯವಾಗುವಂತೆ ಭೂಸ್ವಾಧೀನ ಅಧಿಸೂಚನೆ ರದ್ದು ಮಾಡಲಾಗಿದೆ. ಈ ಮೂಲಕ ಕಳೆದ ಮೂರುವರೆ ವರ್ಷಗಳಿಂದ ನಡೆದಿರುವ ರೈತರ ಹೋರಾಟ ತಾರ್ಕಿಕ ಅಂತ್ಯ ಕಂಡಿದ್ದು, ಅನ್ನದಾತರ ಆಂದೋಲನಕ್ಕೆ ದೊಡ್ಡ ಗೆಲುವು ಲಭಿಸಿದೆ.

ಕೆಐಎಡಿಬಿಯಿಂದ 13 ಗ್ರಾಮಗಳಲ್ಲಿ 1,777 ಎಕರೆ ಭೂ ಸ್ವಾಧೀನ ಹೊರಡಿಸಲಾಗಿದ್ದ ಅಧಿಸೂಚನೆ ವಿರೋಧಿಸಿ ರೈತರು ಸುಮಾರು 1,200ಕ್ಕೂ ಹೆಚ್ಚು ದಿನಗಳಿಂದ ಹೋರಾಟ ನಡೆಸುತ್ತಿದ್ದರು. ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ ಈ ಹೋರಾಟ ಆರಂಭವಾಗಿತ್ತು. ಅಂದು ಪ್ರತಿಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ರೈತರ ಪರ ಮಾತನಾಡಿ ಬೆಂಬಲಿಸಿ ಯೋಜನೆಯನ್ನು ರದ್ದುಗೊಳಿಸಬೇಕೆಂದು ವಿಧಾನಸಭೆಯಲ್ಲಿ ಒತ್ತಾಯಿಸಿದ್ದರು. ಅಂದು ಹೋರಾಟ ಬೆಂಬಲಿಸಿದ್ದ ಸಿದ್ದರಾಮಯ್ಯ ಇಂದು ಮುಖ್ಯಮಂತ್ರಿ ಆಗಿದ್ದಾರೆ. ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು ಎಂದು ರೈತರು ಆಗ್ರಹಿಸಿದ್ದರು.

ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹಾಗೂ ಇತರ ಗ್ರಾಮಗಳಲ್ಲಿನ ಭೂಸ್ವಾಧೀನ ಪ್ರಕ್ರಿಯೆಯನ್ನು ನಮ್ಮ ಸರ್ಕಾರ ಸಂಪೂರ್ಣವಾಗಿ ಕೈ ಬಿಟ್ಟಿದೆ. ಯಾವುದೇ ಕಾರಣಕ್ಕಾದರೂ ಭೂಸ್ವಾಧೀನಕ್ಕೆ ಬಿಟ್ಟರೆ ಈ ಕೈಗಾರಿಕೆ ಬೇರೆ ಕಡೆ ಹೋಗುವ ಸಾಧ್ಯತೆ ಇದ್ದು, ಇದರಿಂದ ಕರ್ನಾಟಕ ಜನತೆಗೆ ಉದ್ಯೋಗ ನಷ್ಟವೂ ಸಂಭವಿಸಲಿದೆ. ಆದರೂ ಸರ್ಕಾರ ರೈತರ ಬೇಡಿಕೆಗಳಿಗೆ ಮನ್ನಣೆ ನೀಡಿದ್ದು, ರೈತಪರ ನಿರ್ಣಯ ಕೈಗೊಂಡಿದೆ. ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವ ಮೂಲಕ ಅನ್ನದಾತ ಮೊದಲು ಎಂಬ ಸಂದೇಶವನ್ನು ರವಾನಿಸಿದೆ ಎಂದು ಸಭೆಯ ಬಳಿಕ ಸಿದ್ದರಾಮಯ್ಯ ತಿಳಿಸಿದರು.



ದೇವನಹಳ್ಳಿ ತಾಲೂಕು ಚನ್ನರಾಯಪಟ್ಟಣ ಹಾಗೂ ಇತರ ಗ್ರಾಮಗಳಲ್ಲಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈ ಬಿಟ್ಟಿದ್ದೇವೆ. ಕೆಲವು ರೈತರು ಜಮೀನು ನೀಡಲು ಸಿದ್ಧರಿರುವುದಾಗಿ ಮುಂದೆ ಬಂದಿದ್ದಾರೆ. ಜಮೀನು ನೀಡಲು ಇಚ್ಚಿಸುವವರ ಜಮೀನು ಸರ್ಕಾರ ಸ್ವಾಧೀನಪಡಿಸಿಕೊಳ್ಳಲಿದ್ದು, ಅವರಿಗೆ ಹೆಚ್ಚಿನ ಪರಿಹಾರ ಮತ್ತು ಅಭಿವೃದ್ಧಿಪಡಿಸಿದ ಜಮೀನು ನೀಡಲಾಗುವುದು. ಅಂತಹ ರೈತರಿಗೆ ಮಾರ್ಗಸೂಚಿ ದರಕ್ಕಿಂತ ಹೆಚ್ಚುವರಿ ದರವನ್ನು ನೀಡಲಿದೆ. ಆದರೆ ಆ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳನ್ನು ಮುಂದುವರೆಸಲು ಬಯಸುವ ರೈತರು ಕೃಷಿ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗಬಹುದಾಗಿದ್ದು ಅಂತಹ ರೈತರ ಜಮೀನನ್ನು ಅಧಿಸೂಚನೆಯಿಂದ ಕೈಬಿಟ್ಟು ಭೂಸ್ವಾಧೀನ ಪ್ರಕ್ರಿಯೆ ರದ್ದುಪಡಿಸಲಾಗುವುದು ಎಂದು ತಿಳಿಸಿದ್ದಾರೆ.

ರಾಜ್ಯದ ಪ್ರತಿಯೊಬ್ಬರ ವರಮಾನ ಹೆಚ್ಚಳವಾಗಬೇಕಿದ್ದರೆ ಅಭಿವೃದ್ಧಿ ಕಾರ್ಯ ನಡೆಯಬೇಕಾಗಿದೆ. ಹೊಸ ಕೈಗಾರಿಕೆಗಳ ಪ್ರಾರಂಭಕ್ಕೆ, ಬಂಡವಾಳ ಹೂಡಿಕೆಗೆ ಜಮೀನಿನ ಅಗತ್ಯವಿದೆ. ಜಮೀನು ಸ್ವಾಧೀನಪಡಿಸಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರ್ಕಾರ ನೀಡಬೇಕಾಗುತ್ತದೆ. 1777 ಎಕ್ರೆ ಜಮೀನು ದೇವನಹಳ್ಳಿ ತಾಲೂಕಿನಲ್ಲಿ ಸ್ವಾಧೀನಪಡಿಸಿಕೊಂಡು, ಅಲ್ಲಿ ಏರೋಸ್ಪೇಸ್ ಪ್ರಾರಂಭಿಸುವುದು ಸರ್ಕಾರದ ಉದ್ದೇಶವಾಗಿತ್ತು. ಆದರೆ ರೈತರು ಪ್ರತಿಭಟಿಸಿದ್ದರಿಂದ ಭೂಸ್ವಾಧೀನ ಪ್ರಕ್ರಿಯೆ ರದ್ದುಪಡಿಸಿ ಕೈಗಾರಿಕೆಗಳಿಗೆ ಬೇರೆಡೆ ಜಮೀನು ನೀಡಲಾಗುವುದು ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿರುತ್ತದೆ. ವಾಸ್ತವವಾಗಿ, ಇದು 2020ರಲ್ಲಿ ಪ್ರಾರಂಭವಾದ ಒಂದು ಪ್ರತಿಭಟನೆಯಾಗಿದ್ದು ಸ್ಥಳೀಯ ರೈತರ ಗುಂಪಿನಿಂದ ಪ್ರಾರಂಭವಾಯಿತು. ಮುಂದೆ ಚಳುವಳಿ ರೂಪ ತಾಳಿ ಬೃಹದಾಕಾರವಾಗಿ ಬೆಳೆದು ಪ್ರಕಾಶ್‌ರೈ ಮತ್ತು ಇನ್ನಿತರ ಸಾಮಾಜಿಕ ವ್ಯಕ್ತಿಗಳು ಮತ್ತು ಸಂಘಟನೆಗಳ ಜೊತೆಗೂಡಿ ಪ್ರತಿಭಟನೆಯು ಮುಂದುವರೆಯಿತು. ದೇವನಹಳ್ಳಿ ತಾಲೂಕಿನ 13 ಗ್ರಾಮಗಳಲ್ಲಿ ಭೂಮಿ ಸ್ವಾಧೀನತೆ ವ್ಯಾಪಿಸಿದ್ದು ಈ ಹಿಂದೆ ಭೂಸ್ವಾಧೀನ ಪ್ರಕ್ರಿಯೆಗಳು ಕಡಿಮೆ ಮಾರುಕಟ್ಟೆ ದರಗಳನ್ನು ಹೊಂದಿದ್ದವು. ರೈತರು ತಮ್ಮ ಭೂಮಿಯನ್ನು ಕಳೆದುಕೊಳ್ಳುವ ಕಾರಣದಿಂದಾಗಿ ಆರ್ಥಿಕ ಸಂಕಷ್ಟವನ್ನು ಎದುರಿಸಿದರು. ಆದ್ದರಿಂದ ಚಳುವಳಿಯು ಉಗ್ರ ರೂಪ ತಾಳಿ ವಿವಿಧ ಪ್ರಮುಖ ಸಂಸ್ಥೆಗಳು, ರೈತರು, ವಕೀಲರು, ರಾಜಕಾರಣಿಗಳು, ಸಾಮಾಜಿಕ ಕಾರ್ಯಕರ್ತರು ಸೇರಿದಂತೆ ಹಲವು ಜನರನ್ನು ಒಳಗೊಂಡು ಮುಖ್ಯಮಂತ್ರಿಗಳ ಸಭೆಯೊಂದಿಗೆ ಮತ್ತು ಭೂಸ್ವಾಧೀನ ರದ್ದಿನೊಂದಿಗೆ ಈ ಚಳುವಳಿ ತಾರ್ಕಿಕ ಅಂತ್ಯಕ್ಕೆ ಬಂದು ತಲುಪಿತು.

ಮುಖ್ಯಮಂತ್ರಿಯವರು ನಾಲ್ಕು ತಿಂಗಳ ಅವಧಿಯಲ್ಲಿ ಹಲವಾರು ಸುತ್ತು ಅಧಿಕಾರಿಗಳೊಂದಿಗೆ ಮತ್ತು ರೈತರೊಂದಿಗೆ ಸಭೆಸರಣಿ ನಡೆಸಿದರು, ಮತ್ತು ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯಲ್ಲಿ ಸ್ಥಾಪಿಸಲು ಉದ್ದೇಶಿರುವ ಹೈಟೆಕ್ ರಕ್ಷಣಾ ಮತ್ತು ವೈಮಾಂತರಿಕ್ಷ ಪಾರ್ಕ್‌ಗಾಗಿ ಜಮೀನು ನೀಡಲು ರೈತರು ಭಾರೀ ಪ್ರತಿಭಟನೆ ನಡೆಸಿ ವಿರೋಧಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಭೂಸ್ವಾಧೀನ ಕೈ ಬಿಡಲು ನಿರ್ಧರಿಸಿತು. ಭೂಸ್ವಾಧೀನದ ಅಧಿಸೂಚನೆಯನ್ನು ಕೈಬಿಟ್ಟಿರುವ ಸರ್ಕಾರದ ನಿರ್ಧಾರಕ್ಕೆ ರೈತರು ಸಂತಸ ವ್ಯಕ್ತಪಡಿಸಿದ್ದಾರೆ. ಹೋರಾಟಕ್ಕೆ ಯಶಸ್ಸು ದೊರೆತಾಗ ಸಂಭ್ರಮಿಸುವುದು ಸಹಜ. ಆದರೆ, ರೈತರು ಸಾಗಬೇಕಾಗಿರುವ ದಾರಿ ಹಾಗೂ ಎದುರಿಸಬೇಕಾದ ಸವಾಲು ದೀರ್ಘವಾದುದು, ಭೂಸ್ವಾಧೀನದ ಅಧಿಸೂಚನೆ ಕೈಬಿಟ್ಟಿದ್ದರೂ, ಸ್ವಯಂ ಪ್ರೇರಣೆಯಿಂದ ಜಮೀನು ನೀಡುವ ರೈತರ ಭೂಮಿಯನ್ನು ಪಡೆಯುವುದಾಗಿ ಹಾಗೂ ಆ ಜಮೀನಿಗೆ ಮಾರ್ಗಸೂಚಿ ದರಕ್ಕಿಂತ ಹೆಚ್ಚಿನ ಪರಿಹಾರ ನೀಡುವುದಾಗಿ ಸರ್ಕಾರ ಹೇಳಿದೆ. ಈ ನಿರ್ಧಾರ, ಭೂಮಿಯನ್ನು ಮಾರುವ ಇಲ್ಲವೇ ಮಾರದಿರುವ ಸ್ವಾತಂತ್ರ್ಯವನ್ನು ರೈತರಿಗೆ ಉಳಿಸಿರುವಂತೆ ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ, ಭೂಮಿಯನ್ನು ಮಾರುವ ಅವಕಾಶ ಮುಕ್ತವಾಗಿರುವುದು ರೈತರಲ್ಲಿ ಗೊಂದಲ ಮೂಡಿಸಬಹುದು ಹಾಗು ಕೃಷಿಯ ಬಗ್ಗೆ ಭರವಸೆಗಳನ್ನು ಕಳೆದುಕೊಂಡವರು ತಮ್ಮ ಭೂಮಿ ಬಿಟ್ಟುಕೊಡಲು ಒತ್ತಾಸೆಯಾಗಿ ಪರಿಣಮಿಸಬಹುದು, ಕೃಷಿ ಭೂಮಿಯನ್ನು ಉಳಿಸಿಕೊಳ್ಳಲು ಅನುಕೂಲ ಕಲ್ಪಿಸಬೇಕಾದ ಸರ್ಕಾರವೇ, ಮಾರಾಟದ ಸಾಧ್ಯತೆಗಳನ್ನು ರೈತರ ಮುಂದಿಡುವ ವಿರೋಧಾಭಾಸ ಸುಲಭ ವ್ಯಾಖ್ಯಾನಕ್ಕೆ ನಿಲುಕುವಂತಹದ್ದಲ್ಲ. ಆರಂಭದಲ್ಲಿ ಕೆಲವಷ್ಟೇ ರೈತರು ಭೂಮಿಯನ್ನು ಬಿಟ್ಟುಕೊಟ್ಟರೂ, ದೀರ್ಘಾವಧಿಯಲ್ಲಿ ಉಳಿದ ರೈತರಿಗೂ ಆರ್ಥಿಕ ಲಾಭದ ಆಸೆ ಮೊಳಕೆಯೊಡೆದು ತಮ್ಮ ಭೂಮಿಯನ್ನು ಸಹ ಮಾರುವ ಸ್ವಯಂ ಒತ್ತಡ ಸೃಷ್ಟಿಸಬಹುದು. ಕೃಷಿ ಭೂಮಿಯನ್ನು ಉಳಿಸಿಕೊಳ್ಳುವ ಹಾಗೂ ಕೃಷಿಯಲ್ಲಿ ಮುಂದುವರಿಯುವ ಅಗ್ನಿದಿವ್ಯವನ್ನು ಹಾಯುವ ಅವಕಾಶ ಈಗ ರೈತರೆದುರು ಇದೆ. ಆದರೆ ರಾಜ್ಯದ ಅಭಿವೃದ್ಧಿ ಮತ್ತು ಕೈಗಾರಿಕೆಗಳಿಗೆ ಜಮೀನು ಒದಗಿಸಲು ಸರ್ಕಾರ ವಿಫಲವಾದರೆ ಬೇರೊಂದು ರಾಜ್ಯಕ್ಕೆ ಉದ್ಯಮಿಗಳು ಪಲಾಯನಗೊಳ್ಳುವ ಅವಕಾಶಗಳಿದ್ದು, ಈ ಭೂಸ್ವಾಧೀನ ರದ್ದಿನ ಹಿನ್ನೆಲೆಯಲ್ಲಿ ನೆರೆಯ ಆಂಧ್ರಪ್ರದೇಶದ ಸರ್ಕಾರ ಉದ್ಯಮಿಗಳನ್ನು ತನ್ನ ರಾಜ್ಯಕ್ಕೆ ಆಹ್ವಾನಿಸಿ ದೇವನಹಳ್ಳಿಯಿಂದ ಕೇವಲ 100 ಕಿ.ಮೀ. ಅಂತರದಲ್ಲಿ ಸರ್ಕಾರದ ಜಮೀನನ್ನು ನೀಡಲು ಮುಂದಾಗಿರುವ ಬೆಳವಣಿಗೆಯಾಗಿರುತ್ತದೆ. ಈ ಅನಿರೀಕ್ಷಿತ ಬೆಳವಣಿಗೆಯಿಂದಾಗಿ ಉದ್ಯಮಿಗಳಿಗೆ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ತೊಡಕಾಗಿರುವ ಈ ಭೂಸ್ವಾಧೀನ ಸಮಸ್ಯೆಯನ್ನು ಕಾಂಗ್ರೆಸ್ ಸರ್ಕಾರ ಹೇಗೆ ನಿಭಾಯಿಸುತ್ತದೆ ಎಂದು ಕಾದು ನೋಡಬೇಕಾಗಿದೆ.

–ವಿಜಯ್ ಬೆಂಗಾವಲಿ

# ಜಿಎಸ್‌ಟಿ ನೋಟಿಸ್ ಮತ್ತು ಬೆಂಗಳೂರು ಬಂದ್

**ಯು**ಪಿಐ ಮೂಲಕ ವರ್ಷವೊಂದರಲ್ಲಿ ರೂ.40 ಲಕ್ಷಕ್ಕಿಂತ ಹೆಚ್ಚು ಆದಾಯ ಗಳಿಸಿದ ಬೇಕರಿ, ಹೋಟೆಲ್, ಬೀಡಾ ಅಂಗಡಿ, ಟೀ–ಅಂಗಡಿ ಮಾಲೀಕರಿಗೆ ವಾಣಿಜ್ಯ ತೆರಿಗೆ ಇಲಾಖೆಯು ಈಚೆಗೆ ನೋಟಿಸ್ ನೀಡಿದ್ದು, ರಾಜ್ಯದಲ್ಲಿ ಯುಪಿಐ ಮೂಲಕ ಹಣ ಪಡೆಯುತ್ತಿರುವ ಸುಮಾರು 65,000 ವರ್ತಕರ ಮಾಹಿತಿಯನ್ನು ಯುಪಿಐ ಪ್ಲಾಟ್‌ಫಾರ್ಮ್‌ಗಳಿಂದ ವಾಣಿಜ್ಯತೆರಿಗೆ ಇಲಾಖೆ ಪಡೆದುಕೊಂಡಿತ್ತು. ಎಲ್ಲರೂ ಜಿಎಸ್‌ಟಿಗೆ ನೋಂದಾಯಿಸಿ ಎಂದು ಸೂಚಿಸಿತ್ತು. ಆದರೆ ಮುಕ್ಕಾಲು ಭಾಗ ಸಣ್ಣ ವರ್ತಕರು ಬೇಕರಿ, ಪಾನ್ ಶಾಪ್, ಟೀ ಸ್ಟಾಲ್‌ನವರು ಈ ಮೂರು ವರ್ಷವು ತೆರಿಗೆ ಕಟ್ಟುವಲ್ಲಿ ನಿರ್ಲಕ್ಷಿಸಿದ್ದರು.

‘ಆರ್ಥಿಕ ವರ್ಷವೊಂದರಲ್ಲಿ ಯುಪಿಐ ಮೂಲಕ ರೂ.40 ಲಕ್ಷಕ್ಕಿಂತ ಹೆಚ್ಚು ಹಣ ಪಡೆದ ಸುಮಾರು 15,000 ಮಂದಿಯ ವಿವರ ಇಲಾಖೆಗೆ ದೊರೆತಿದ್ದು ಜುಲೈ 10 ರವರೆಗೆ 5,864 ಮಂದಿಗೆ ತೆರಿಗೆ ಕಟ್ಟಲು ನೋಟಿಸ್ ಜಾರಿ ಮಾಡಲಾಗಿತ್ತು. ಹಲವರಿಗೆ ಜಿಎಸ್‌ಟಿ ಕಟ್ಟಿ ಎಂದು ಸೂಚಿಸಿದ್ದರೆ, ಕೆಲವರಿಗೆ ವಿವರಣೆ ನೀಡಿ ಎಂದು ವಾಣಿಜ್ಯ ತೆರಿಗೆ ಇಲಾಖೆಯು ಸೂಚಿಸಲಾಗಿತ್ತು. ಯುಪಿಐ ಕ್ಯೂಆರ್ ಕೋಡ್ ಮೂಲಕ ತಮ್ಮ ಬ್ಯಾಂಕ್ ಖಾತೆಗಳಿಗೆ 40 ಲಕ್ಷಕ್ಕೂ ಮೀರಿ ವಹಿವಾಟಿನ ಹಣ ಪಡೆದ ಬೇಕರಿ, ಪಾನ್ ಶಾಪ್ ಮತ್ತು ಸಣ್ಣಂಗಡಿ ಯವರು ಇದರಿಂದ ಕಂಗೆಟ್ಟು ಯುಪಿಐ ಕ್ಯೂ ಆರ್ ಕೋಡ್ ಹರಿದು ಪ್ರತಿಭಟಿಸಿ, ನಗದು ವ್ಯವಹಾರದ ಬದಲಿ ವ್ಯವಸ್ಥೆಗೆ ಮುಂದಾಗಿದ್ದರು. ಇದನ್ನು ಸಾರ್ವಜನಿಕರಿಗೆ ಮತ್ತು ಗ್ರಾಹಕರಿಗೆ ತಿಳಿಸುತ್ತಾ ಜುಲೈ 17 ರಿಂದ ಸಂಪೂರ್ಣವಾಗಿ ಕ್ಯೂಆರ್ ಕೋಡ್ ಆಧಾರಿತ ಯುಪಿಐ ವಹಿವಾಟುಗಳನ್ನು ತ್ಯಜಿಸುವುದಾಗಿ ಮತ್ತು ಇನ್ನು ಮುಂದೆ ಕೇವಲ ನಗದು ವ್ಯವಹಾರದಲ್ಲೆ ಹಣ ಪಾವತಿಸುವಂತೆ ಗ್ರಾಹಕರಲ್ಲಿ ವಿನಂತಿಸಿ ಕೊಂಡಿದ್ದರು.

ಸಣ್ಣ ವ್ಯಾಪಾರಿಗಳಿಗೆ ರಾಜ್ಯ ವಾಣಿಜ್ಯ ಇಲಾಖೆಯು ನೀಡಿದ ಈ ತೆರಿಗೆ ನೋಟಿಸಿನಿಂದ ಕಂಗೆಟ್ಟು ಸಣ್ಣ ವ್ಯಾಪಾರಿಗಳು ಜುಲೈ 23 ರಂದು ಪ್ರತಿಭಟನಾ ರ್‍ಯಾಲಿ ಮತ್ತು ಜುಲೈ 25 ರಂದು ಬೆಂಗಳೂರು ಬಂದ್ ಆಚರಿಸಲು ಸಿದ್ಧತೆ ಮಾಡಿಕೊಂಡಿದ್ದರು.

ಆದರೆ ಈ ಪ್ರತಿಭಟನೆ ಮತ್ತು ಬೆಂಗಳೂರು ಬಂದ್ ಕಾವು ಸಾರ್ವಜನಿಕವಾಗಿ ಬಹಿರಂಗವಾಗುತ್ತಿದ್ದಂತೆ ಸಣ್ಣ ಉದ್ಯಮಿದಾರರು ಮತ್ತು ವರ್ತಕರೊಂದಿಗೆ ಮುಖ್ಯಮಂತ್ರಿಯವರು ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಲು ಮುಂದಾಗಿ ಜುಲೈ 23 ರಂದು ಸಭೆ ನಡೆಸಿ ತಮ್ಮ ಸರ್ಕಾರದ ವಾಣಿಜ್ಯ ಇಲಾಖೆಯು ನೀಡಿರುವ ತೆರಿಗೆ ಪಾವತಿ ನೋಟಿಸ್‌ಗಳನ್ನು




ಹಿಂಪಡೆಯುವುದಾಗಿ ಮಾಧ್ಯಮದಲ್ಲಿ ಘೋಷಿಸಿದರು. ಮತ್ತು ಇನ್ನು ಮುಂದೆ ಕಳೆದ ಮೂರು ವರ್ಷದ ಹಿಂಬಾಕಿಯನ್ನು ಸರ್ಕಾರವು ಕೇಳುವುದಿಲ್ಲ. ಎಲ್ಲಾ ಸಣ್ಣ ಅಂಗಡಿಗಳು, ಬೇಕರಿ, ಟೀ ಸ್ಟಾಲ್, ಪಾನ್ ಶಾಪ್ ಇನ್ನಿತರ ವಾಣಿಜ್ಯ ವರ್ತಕರು ಜಿಎಸ್‌ಟಿ ಕಡ್ಡಾಯವಾಗಿ ನೋಂದಾವಣಿ ಮಾಡಿಸಿಕೊಳ್ಳಲು ಸೂಚಿಸಿದರು.

### ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮತ್ತೊಂದು ಮಹತ್ವದ ಮೈಲಿಗಲ್ಲು

# ಭಾರತದ ಮೊದಲ ಸಂಪೂರ್ಣ ಯುಪಿಐ ಆಧಾರಿತ ಬ್ಯಾಂಕ್ ಬೆಂಗಳೂರಿನಲ್ಲಿ ಆರಂಭ



**ಭಾ**ರತದ ಮೊದಲ ಸಂಪೂರ್ಣ ಯುಪಿಐ (ಯುನಿಫೈಡ್ ಪೇಮೆಂಟ್ ಇಂಟರ್ ಪೇಸ್ ಅಥವಾ ಏಕೀಕೃತ ಪಾವತಿ ಸಂಪರ್ಕ ವ್ಯವಸ್ಥೆ) ಆಧಾರಿತ ಬ್ಯಾಂಕ್ ಶಾಖೆಯನ್ನು ಬೆಂಗಳೂರಿನ ಕೋರಮಂಗಲದಲಿ ಫಿನ್‌ಟೆಕ್ ಸಂಸ್ಥೆ ಸ್ಲೈಸ್ ಆರಂಭಿಸಿದೆ. ಯುಪಿಐ ಇಂಟಿಗ್ರೇಟೆಡ್ ಎಟಿಎಂ, ಇನ್‌ಸ್ಟಾಂಟ್ ಅಕೌಂಟ್ ಓಪನಿಂಗ್, ನಗದು ವಹಿವಾಟು ಸೇರಿದಂತೆ ಸಂಪೂರ್ಣ ಡಿಜಿಟಲ್ ಬ್ಯಾಂಕಿಂಗ್ ಅನುಭವ ಇಲ್ಲಿ ಸಿಗಲಿದೆ. ಅಂದ ಹಾಗೆ, ಈ ಬ್ರ್ಯಾಂಚ್‌ನಲ್ಲಿ ವಹಿವಾಟು ನಡೆಸಲು ಡೆಬಿಟ್ ಕಾರ್ಡ್ ಸಹ ಬೇಕಾಗಿಲ್ಲ. ಯುಪಿಐ ಕ್ಯೂಆರ್ ಕೋಡ್ ಇದ್ದರೆ ಸಾಕು!

ಬೆಂಗಳೂರಿನ ಬ್ಯಾಂಕಿಂಗ್ ಕ್ಷೇತ್ರದ ಅತ್ಯಾಧುನಿಕ ತಂತ್ರಜ್ಞಾನಕ್ಕೆ ಇದೀಗ ಮತ್ತೊಂದು ಹೊಸ ಸೇರ್ಪಡೆಯಾಗಿದೆ. ಕೋರಮಂಗಲದಲ್ಲಿ ಸ್ಲೈಸ್ ಫಿನ್‌ಟೆಕ್ ಸಂಸ್ಥೆ ಭಾರತದ ಮೊದಲ ಸಂಪೂರ್ಣ ಯುಪಿಐ (ಯುನಿಫೈಡ್ ಪೇಮೆಂಟ್ ಇಂಟರ್‌ಪೇಸ್ ಅಥವಾ ಏಕೀಕೃತ ಪಾವತಿ ಸಂಪರ್ಕ ವ್ಯವಸ್ಥೆ) ಆಧಾರಿತ ಬ್ಯಾಂಕ್ ಶಾಖೆಯನ್ನು ತೆರೆದಿದೆ. ಯುಪಿಐ ಮೂಲಕ ತ್ವರಿತ ಖಾತೆ ತೆರೆಯುವಿಕೆ, ನಗದು ವಹಿವಾಟು ಮತ್ತು ರೋಬೋಟ್ ಸಹಾಯಕ ಸೇವೆಗಳು ಶಾಖೆಯಲ್ಲಿ ಲಭ್ಯವಿದೆ. ಡೆಬಿಟ್ ಕಾರ್ಡ್ ಇಲ್ಲದೆಯೇ ಯುಪಿಐ ಆ್ಯಪ್ ಸಹಾಯ ದಿಂದಲೇ ಬ್ಯಾಂಕಿಂಗ್ ವಹಿವಾಟು ನಡೆಸ ಬಹುದಾಗಿದೆ.

ಕೋರಮಂಗಲದ 80 ಅಡಿ ರಸ್ತೆಯಲ್ಲಿರುವ ಈ ಶಾಖೆಯು ಕಾರ್ಡ್‌ಗಳ ಬದಲಿಗೆ ಯುಪಿಐ ಆ್ಯಪ್ ಬಳಸಿ ಹಣವನ್ನು ಠೇವಣಿ ಇಡಲು ಮತ್ತು ಹಿಂಪಡೆಯಲು ಅನುವು ಮಾಡಿಕೊಡುತ್ತದೆ. ಈ ವ್ಯವಸ್ಥೆಯು ಡಿಜಿಟಲ್ ಕಿಯೋಸ್ಕ್‌ಗಳನ್ನು ಒಳಗೊಂಡಿದೆ. ಗ್ರಾಹಕರು ಟ್ಯಾಬ್ಲೆಟ್‌ಗಳನ್ನು ಬಳಸಿಕೊಂಡು ಉಳಿತಾಯ ಖಾತೆಗಳನ್ನು ತೆರೆಯಬಹುದಾಗಿದೆ. ಶಾಖೆಯ ಆವರಣದೊಳಗೆ ಗ್ರಾಹಕರಿಗೆ ಮಾರ್ಗದರ್ಶನ ನೀಡಲು ಸಹಾಯ ಮಾಡುವ ರೋಬೋಟ್ ಸಹ ಒದಗಿಸಲಾಗಿದೆ. ಹೊಸ ಮಾದರಿಯ ಬ್ಯಾಂಕ್ ಶಾಖೆಯ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಸಕಾರಾತ್ಮಕ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಹಲವಾರು ಬಳಕೆದಾರರು ಯುಪಿಐ ಆಧಾರಿತ ಸೆಟಪ್‌ನ ಅನುಕೂಲತೆ ಮತ್ತು ವೇಗದ ಬ್ಯಾಂಕಿಂಗ್ ಸೇವೆಯನ್ನು ಶ್ಲಾಘಿಸಿದ್ದಾರೆ.

ಪ್ರಾಯೋಗಿಕವಾಗಿ ಈ ಯುಪಿಐ ಆಧಾರಿತ ಹೊಸ ಶಾಖೆಯನ್ನು ಆರಂಭಿಸಲಾಗಿದೆ. ಶಾಖೆಗೆ ಭೇಟಿ ನೀಡುವ ಗ್ರಾಹಕರು ಕನಿಷ್ಠ ಮಾನವ ಸಂವಹನ ಮತ್ತು ಪೂರ್ಣ ಪ್ರಮಾಣದಲ್ಲಿ ಯುಪಿಐ ನೆರವಿನೊಂದಿಗೆ ನಗದು ಠೇವಣಿ ಇರಿಸುವಿಕೆ, ಹಿಂಪಡೆಯುವಿಕೆ ಮತ್ತು ಖಾತೆ ಸೆಟಪ್‌ನಂತಹ ಮೂಲಭೂತ ಬ್ಯಾಂಕಿಂಗ್ ಸೌಕರ್ಯಗಳನ್ನು ಪಡೆಯಬಹುದಾಗಿದೆ ಎಂದು ಸ್ಲೈಸ್ ತಿಳಿಸಿದೆ.

ಯುಪಿಐ–ಲಿಂಕ್ಡ್ ಕ್ರೆಡಿಟ್ ಕಾರ್ಡ್ ಅನ್ನು ಸಹ ಬಿಡುಗಡೆ ಮಾಡಿರುವುದಾಗಿ ಸ್ಲೈಸ್ ತಿಳಿಸಿದ್ದು, ಇದು ಯಾವುದೇ ವಾರ್ಷಿಕ ಅಥವಾ ಸೇರ್ಪಡೆ ಶುಲ್ಕವಿಲ್ಲದೆ ಗ್ರಾಹಕರಿಗೆ ದೊರೆಯಲಿದೆ ಎಂದಿದೆ. ಕಾರ್ಡ್ ಖರೀದಿ ಮೇಲೆ ಶೇಕಡ 3ವರೆಗೆ ಕ್ಯಾಶ್‌ಬ್ಯಾಕ್ ಮತ್ತು ಪಾವತಿಗಳನ್ನು 3 ಬಡ್ಡಿ–ಮುಕ್ತ ಇಎಂಐಗಳಾಗಿ ಮಾಡಿಕೊಡುವ 'ಸ್ಲೈಸ್ ಇನ್ 3' ಸೌಲಭ್ಯ ಕೂಡ ನೀಡಲಾಗುತ್ತಿದೆ ಎಂದು ಸಂಸ್ಥೆ ತಿಳಿಸಿದೆ.

ನಮ್ಮ ಬೆಂಗಳೂರಿನ ಕೋರಮಂಗಲದಲ್ಲಿ ಪ್ರಾರಂಭಿಸಿದೆ. ಫಿನ್‌ಟೆಕ್ ಕಂಪನಿ ಸ್ಲೈಸ್ ತನ್ನ ಸ್ಲೈಸ್ ಯುಪಿಐ ಕ್ರೆಡಿಟ್ ಕಾರ್ಡ್ ಮತ್ತು ಯುಪಿಐ–ಚಾಲಿತ ಭೌತಿಕ ಬ್ಯಾಂಕ್ ಶಾಖೆಯಲ್ಲಿ ಎಟಿಎಂ ಕೂಡ ಅಳವಡಿಸಲಾಗಿದೆ. ಈ ಎಟಿಎಂ ನಗದು ಸ್ವೀಕರಿಸುತ್ತದೆ.

ಇದು ಯಾವುದೇ ಯುಪಿಐ ವಹಿವಾಟಿನಷ್ಟೇ ಸಹಜವಾದ, ಬಳಕೆದಾರರು ಸರಳವಾಗಿ ಕ್ಯೂಆರ್ ಕೋಡ್ ಗಳನ್ನು ಸ್ಕ್ಯಾನ್ ಮಾಡಬಹುದು ಅಥವಾ ಯುಪಿಐ ಪಾವತಿಗಳನ್ನು ಮಾಡಬಹುದು, ತಮ್ಮ ಕ್ರೆಡಿಟ್ ಲೈನ್‌ನಿಂದ ಸುಲಭವಾಗಿ ಹಣವನ್ನು ಬಳಸಬಹುದು. ಸ್ಲೈಸ್ ಯುಪಿಐ ಕ್ರೆಡಿಟ್ ಕಾರ್ಡ್ ಎಲ್ಲಾ ಖರ್ಚುಗಳ ಮೇಲೆ ಗ್ರಾಹಕರಿಗೆ ಶೇಕಡ 3ವರೆಗೆ ಕ್ಯಾಶ್‌ಬ್ಯಾಕ್ ನೀಡುತ್ತದೆ, ಆದರೆ ನವೀನ 'ಸ್ಲೈಸ್ ಇನ್ 3' ವೈಶಿಷ್ಟ್ಯವು ಖರ್ಚುಗಳನ್ನು ಮೂರು ಬಡ್ಡಿ–ರಹಿತ ಕಂತುಗಳಾಗಿ ಪರಿವರ್ತಿ ಸುವ ತಕ್ಷಣದ ಸಾಮರ್ಥ್ಯವನ್ನು ನೀಡುತ್ತದೆ ಎಂಬುದು ಮತ್ತೊಂದು ವಿಶೇಷ.

ಸ್ಲೈಸ್ ಸೂಪರ್ ಕಾರ್ಡ್ ಭಾರತದಾದ್ಯಂತ ಔಪಚಾರಿಕ ಕ್ರೆಡಿಟ್ ಪ್ರವೇಶವನ್ನು ವ್ಯಾಪಕವಾಗಿ ವಿಸ್ತರಿಸುವ ಸ್ಲೈಸ್‌ನ ಮಹತ್ವಾಕಾಂಕ್ಷೆಯ ಯೋಜನೆಯು ಯುಪಿಐ ಆಧಾರಿತವಾಗಿದೆ. ಯುಪಿಐ 400 ದಶಲಕ್ಷಕ್ಕೂ ಹೆಚ್ಚು ಭಾರತೀಯ ರಿಗೆ ಡಿಜಿಟಲ್ ಪಾವತಿಗಳಲ್ಲಿ ಕ್ರಾಂತಿಯನ್ನು ಉಂಟು ಮಾಡಿದೆ, ಈ ಪ್ರಕ್ರಿಯೆಯಲ್ಲಿ ಅವರಲ್ಲಿ ಹೆಚ್ಚಿನವರನ್ನು ಕ್ರೆಡಿಟ್ ಅರ್ಹರನ್ನಾಗಿ ಮಾಡಿದೆ.

"ನನ್ನ 40 ವರ್ಷಗಳ ಬ್ಯಾಂಕಿಂಗ್ ಸೇವೆಯಲ್ಲಿ, ನಾನು ಹಲವಾರು ಮೈಲಿಗಲ್ಲುಗಳನ್ನು ಕಂಡಿದ್ದೇನೆ, ಆದರೆ ಭಾರತವು ಬ್ಯಾಂಕಿಂಗ್ ಮತ್ತು ಹಣಕಾಸು ಸೇವಾ ಸೌಲಭ್ಯಗಳನ್ನು ಹೇಗೆ ಗ್ರಹಿಸುತ್ತದೆ ಎಂಬುದರಲ್ಲಿ ಒಂದು ಕ್ರಾಂತಿ ಎಂದು ನಾನು ಭಾವಿಸುವ ಭಾಗವಾಗಿರುವುದಕ್ಕೆ ನಿಜವಾಗಿಯೂ ಹೆಮ್ಮೆಪಡುತ್ತೇನೆ" ಎಂದು ಸ್ಲೈಸ್‌ನ ವ್ಯವಸ್ಥಾಪಕ ನಿರ್ದೇಶಕ (ಎಂಡಿ) ಮತ್ತು ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ (ಸಿಇಒ) ಸತೀಶ್ ಕುಮಾರ್ ಕಲ್ರಾ ಹೇಳಿದರು.

ಬೆಂಗಳೂರಿನಲ್ಲಿ ಈ ಹೊಸ ತಂತ್ರಜ್ಞಾನದ ಸದೃಢ ಹೆಜ್ಜೆಯು ಭಾರತದಾದ್ಯಂತ ಬ್ಯಾಂಕಿನ ಭೌತಿಕ ವಿಸ್ತರಣೆಯ ಪ್ರಯಾಣದಲ್ಲಿ ಮತ್ತು ಅದರ ವ್ಯಾಪಕ ಬೆಳವಣಿಗೆಯ ನಿಟ್ಟಿನಲ್ಲಿ ಒಂದು ನಿರ್ಣಾಯಕ ಆರಂಭವನ್ನು ಗುರುತಿಸುವಲ್ಲಿ ಮೊದಲ ಹೆಜ್ಜೆಯಾಗಿದ್ದು ಇದು ಎಷ್ಟರ ಮಟ್ಟಿಗೆ ಯಶಸ್ವಿಯಾಗಿ ಗ್ರಾಹಕರ ಮನಸೆಳೆದು ಅನುಕೂಲವಾಗುತ್ತದೆಯೇ ಎನ್ನುವುದು ಕಾದು ನೋಡಬೇಕಿದೆ.

# ಸಂತೋಷ ಜೀವನಕ್ಕಾಗಿ ಜಪಾನ್ ವೈದ್ಯ ಇಡೇಕಿವಾಡ ಸಲಹೆ

**ಜ**ಪಾನ್ ದೇಶಕ್ಕೆ ಸೇರಿದ ಮಾನಸಿಕ ವೈದ್ಯ ನಿಪುಣರಾದ "ಡಾ. ಹಿಡೇಕಿ ವಾಡಾ (Hideki Wada, Japanese Psychiatrist)" ಅವರು ಬರೆದ (80 Year Old Wall Keep on walking 80 ವರ್ಷ ನಡೆಯುತ್ತಾ ಇರಿ) ಅನ್ನೋ ಪುಸ್ತಕವು 5 ಲಕ್ಷ ಕಾಪಿಗಳಿಗೂ ಹೆಚ್ಚು ಮಾರಾಟವಾಗಿ, ದೇಶದಲ್ಲೇ ಬೆಸ್ಟ್ ಸೆಲ್ಲರ್ ಆಗಿದೆ.

ಈ ಪುಸ್ತಕದಲ್ಲಿ 60 ರಿಂದ 80 ವರ್ಷ ವಯಸ್ಸಿನಲ್ಲಿ ಇರುವವರಿಗೆ ಆನಂದದಿಂದ ಜೀವಿಸಲಿಕ್ಕಾಗಿ 44 ಉತ್ತಮವಾದ ಸಲಹೆಗಳು ಇವೆ. ಅವೇ ಈ ಕೆಳಗಿನಂತೆ ತಿಳಿಸಲಾಗಿದೆ.

ಪ್ರತಿನಿತ್ಯವೂ ನಡೆಯಿರಿ. ಕೋಪ ಬಂದಾಗ ದೀರ್ಘವಾದ ಉಸಿರನ್ನು ತೆಗೆದುಕೊಳ್ಳಿ. ಶರೀರವು ದಣಿಯುವವರೆಗೂ ವ್ಯಾಯಾಮವನ್ನು ಮಾಡಿ. ಎ.ಸಿ. ಬಳಸುತ್ತಿದ್ದಲ್ಲಿ ಹೆಚ್ಚಾಗಿ ನೀರನ್ನು ಕುಡಿಯಿರಿ. ಡೈಪರುಗಳನ್ನು ಬಳಸುವುದರಿಂದ ಚಲನವಲನ ಸುಲಭವಾಗುತ್ತದೆ. ತಪ್ಪದೇ ನಡೆಯುವುದರಿಂದ ಮೆದುಳು, ಶರೀರ ಚುರುಕಾಗಿ ಇರುತ್ತವೆ. ಗುರುತಿಸಲಾಗದೇ ಹೋಗುವುದು ವಯಸ್ಸಿನಿಂದಾಗಿ ಅಲ್ಲ, ಮೆದುಳನ್ನು ಬಳಸದೇ ಇರುವುದರಿಂದ. ಅತ್ಯಧಿಕ ಔಷಧಿಗಳನ್ನು ತೆಗೆದುಕೊಳ್ಳುವ ಅವಸರವಿಲ್ಲ. ಬಿ.ಪಿ., ಶುಗರ್ ಕೃತ್ರಿಮವಾಗಿ ತಗ್ಗಿಸಿಕೊಳ್ಳುವ ಅವಸರವಿಲ್ಲ. ಒಂಟಿಯಾಗಿ ಇರುವುದು ಒಂಟಿತನ ವೇನಲ್ಲ, ಅದು ಸಂತೋಷಕರ ಸಮಯ. ಆಲಸ್ಯವು ಆರೋಗ್ಯಕ್ಕೆ ಹಾನಿಕಾರಕ ವಲ್ಲವೆಂದು ತಿಳಿದುಕೊಳ್ಳಿ. ವೃದ್ಧರಿಗೆ ಡ್ರೈವಿಂಗ್ ಪ್ರಮಾದಕರವಾಗಬಹುದು. ಲೈಸೆನ್ಸ್ ತೆಗೆದುಕೊಳ್ಳುವ ಕುರಿತಾಗಿ ಪುನಃಪರಿಶೀಲನೆ ಮಾಡಿರಿ. ನಿಮಗೆ ಇಷ್ಟವಾದ ದ್ದನ್ನೇ ಮಾಡಿರಿ, ಇಷ್ಟವಿಲ್ಲದ್ದನ್ನು ಮಾಡಬೇಡಿ. ಪ್ರಕೃತಿ ಸಿದ್ಧವಾದ ಕೋರಿಕೆಗಳು ವಯಸ್ಸಿನೊಂದಿಗೆ ಹೋಗುವುದಿಲ್ಲ. ಮನೆಯಲ್ಲೇ ಇರಬೇಡಿ, ಹೊರಗಡೆ ಹೋಗಿರಿ. ಇಷ್ಟ ಬಂದ ಹಾಗೆ ತಿನ್ನಿರಿ. ಸ್ವಲ್ಪ ದಪ್ಪವಾದರೂ ಪರವಾಗಿಲ್ಲ. ಯಾವುದೇ ಕೆಲಸವಾದರೂ ಜಾಗ್ರತೆಯಿಂದ ಮಾಡಿರಿ. ಇಷ್ಟವಿಲ್ಲದ ವ್ಯಕ್ತಿಗಳನ್ನು ದೂರವಿಡಿ. ದಿನವೆಲ್ಲಾ ಟಿ.ವಿ. ನೋಡಬೇಡಿ. ರೋಗಗಳೊಂದಿಗೆ ಹೋರಾಡಬೇಡಿ, ಅವುಗಳೊಂದಿಗೆ ಕಲೆತು ಜೀವಿಸಿರಿ.

**ಒಂದು ದೊಡ್ಡ ಮಂತ್ರವನ್ನು ನೆನಪಿಟ್ಟುಕೊಳ್ಳಿ:** ದುರ್ಗಮವಾದ ರಸ್ತೆಯಲ್ಲೂ ಸಹ ಮಾರ್ಗವು ಕಾಣಿಸುತ್ತದೆ." ತಾಜಾ ಹಣ್ಣು, ಸಲಾಡು ಗಳನ್ನು ತಿನ್ನಿರಿ. ಸ್ನಾನವನ್ನು 10 ನಿಮಿಷಗಳಲ್ಲೇ ಪೂರ್ತಿ ಮಾಡಿರಿ. ನಿದ್ರೆ ಬಾರದೇ ಹೋದಲ್ಲಿ, ಬಲವಂತವಾಗಿ ನಿದ್ರೆ ಮಾಡಬೇಡಿ. ಸಂತೋಷಕರವಾದ ಕೆಲಸಗಳನ್ನು ಮಾಡುವುದು, ಮೆದುಳನ್ನು ಚುರುಕಾಗಿ ಇರಿಸುತ್ತದೆ. ನಿಮ್ಮ ಮನಸ್ಸಿನ ಮಾತುಗಳನ್ನು ಮಾತನಾಡಿ. "ಹೇಗೆ ಮಾತನಾಡಬೇಕು?" ಅನ್ನೋ ಯೋಚನೆ ಮಾಡಬೇಡಿ. ಓರ್ವ ಫ್ಯಾಮಿಲಿ ಡಾಕ್ಟರ್ ಒಬ್ಬರನ್ನು ತ್ವರಿತವಾಗಿ ನಿರ್ಧರಿಸಿಕೊಳ್ಳಿ, ಭೇಟಿಯಾದಾಗಲೆಲ್ಲಾ ಅವರಿಗೆ



ನಿಮ್ಮ ಎಲ್ಲಾ ದುಗುಡ, ದುಮ್ಮಾನ, ವೇದನೆ, ನೋವು ಎಲ್ಲಾ ವಿವರಿಸಿ ಪರಿಹಾರ ಪಡೆಯಿರಿ. ಅತ್ಯಂತ ಸಹನೆಯಿಂದಿರಿ. ಸ್ವಲ್ಪ ತುಂಟತನ ಹಾಗೂ ಸಿಡುಕು ಸ್ವಭಾವದ ವೃದ್ಧರಂತಿರುವುದು ಚೆನ್ನಾಗಿಯೇ ಇರುತ್ತದೆ. ಆಗೀಗೊಮ್ಮೆ ಮರೆಯುವುದು, ಹಠದ ಸ್ವಭಾವವನ್ನು ಬಿಡುವುದು ಒಳ್ಳೆಯದೇ. ಕಡೆಯ ಅವಧಿಯಲ್ಲಿ ಬರುವ ಡಿಮೆನ್ಷಿಯಾ (ಮರೆವು) ದೇವರು ಕೊಟ್ಟ ವರವೆಂದು ಭಾವಿಸಿರಿ. ಕಲಿಯುವುದನ್ನು ನಿಲ್ಲಿಸಿದಾಗ ನಿಜವಾಗಿಯೂ ವೃದ್ಧರಾಗುತ್ತಾರೆ. ದೊಡ್ಡ ಹೆಸರು ಮಾಡುವ ಕೋರಿಕೆ ಇಟ್ಟುಕೊಳ್ಳಬೇಡಿ. ಇರುವುದನ್ನಷ್ಟೇ ಸಾಕೆಂದುಕೊಳ್ಳಿ. ನಿರ್ದೋಷಿತನ ವೃದ್ಧರ ಪ್ರತ್ಯೇಕತೆ. ಸಮಸ್ಯೆಗಳೇ ಹೆಚ್ಚಾದಂತೆ ಜೀವನವೇ ಆಸಕ್ತಿಕರ. ಸೂರ್ಯ ರಶ್ಮಿಯಲ್ಲಿ ಕುಳಿತುಕೊಳ್ಳುವುದು ಆನಂದವನ್ನು ನೀಡುತ್ತದೆ. ಇತರರಿಗಾಗಿ ಒಳ್ಳೆಯ ಕೆಲಸಗಳನ್ನು ಮಾಡಿರಿ. ಈ ದಿನವನ್ನು ಪ್ರಶಾಂತವಾಗಿ ಜೀವಿಸಿರಿ. ಆಸಕ್ತಿ/ಕೋರಿಕೆ ಜೀವಿತಾವಧಿಯನ್ನು ಹೆಚ್ಚಿಸುತ್ತದೆ. ಯಾವಾಗಲೂ ಪಾಸಿಟಿವ್ ಆಗಿರಿ. ಸ್ವೇಚ್ಛೆಯಾಗಿ ಉಸಿರನ್ನು ತೆಗೆದುಕೊಳ್ಳಿ. ಜೀವನದ ನಿಯಮಗಳು ನಿಮ್ಮ ಕೈಯಲ್ಲೇ ಇರುತ್ತವೆ. ಪ್ರತಿ ವಿಷಯವನ್ನೂ ಶಾಂತತೆಯಿಂದ ಅಂಗೀಕರಿಸಿರಿ. ಸಂತೋಷವಾಗಿ ಇರುವವರು ಯಾವಾಗಲೂ ಎಲ್ಲರಿಂದಲೂ ಪ್ರೀತಿಸಲ್ಪಡುತ್ತಾರೆ. ಸದಾ ಸಂತೋಷದಿಂದ ನಗುವವರಿಗೇ ಅದೃಷ್ಟ ಒಲಿಯುತ್ತದೆ.

60ಕ್ಕಿಂತ ಕಡಿಮೆ ವಯಸ್ಸಿನ ನನ್ನ ಬಂಧುಗಳೇ.... ದಯವಿಟ್ಟು ತಮಗೆ ತಿಳಿದ ನಿಮ್ಮ ಹಿರಿಯರೊಂದಿಗೆ ಈ ವಿಷಯಗಳನ್ನು ಹಂಚಿಕೊಳ್ಳಿ. ಜೀವನವನ್ನು ಸಂತೋಷದಿಂದ ಕಳೆಯಲು ಇವು ಅತ್ಯಂತ ಉಪಯುಕ್ತವಾದ ಸೂಚನೆಗಳು ಎಂದು ಮನದಟ್ಟು ಮಾಡಿಕೊಳ್ಳಿ.

# ಆಗಸದಲ್ಲಿ ಶಕ್ತಿಶಾಲಿ ರೇಡಾರ್ ಕಣ್ಣು–ನಿಸಾರ್

**ಅ**ಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಾದ ನಾಸಾ (ನ್ಯಾಷನಲ್ ಏರೋನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್–ರಾಷ್ಟ್ರೀಯ ವೈಮಾಂತರಿಕ್ಷ ಮತ್ತು ಬಾಹ್ಯಾಕಾಶ ಆಡಳಿತ ಸಂಸ್ಥೆ) ಮತ್ತು ಭಾರತದ ಇಸ್ರೋ (ಇಂಡಿಯನ್ ಸ್ಪೇಸ್ ರಿಸರ್ಚ್ ಆರ್ಗನೈಸೇಷನ್–ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ) ಜಂಟಿಯಾಗಿ ಅಭಿವೃದ್ಧಿಪಡಿಸಿದ ವಿಶೇಷ ಭೂ–ಮೇಲ್ವಿಚಾರಣಾ ರೇಡಾರ್ ಉಪಗ್ರಹವೇ ನಿಸಾರ್.

ಇದು ಬಾಹ್ಯಾಕಾಶದಿಂದ ರೇಡಾರ್ ತರಂಗಗಳನ್ನು ಕಳುಹಿಸುವ ಮತ್ತು ನೆಲದಿಂದ ಹಿಂತಿರುಗುವ ಪ್ರತಿಧ್ವನಿಗಳನ್ನು ಹಿಡಿಯುವ ತಂತ್ರಜ್ಞಾನವಾಗಿದೆ. ಸಾಮಾನ್ಯ ಕ್ಯಾಮೆರಾಗಳಿಗಿಂತ ಭಿನ್ನವಾಗಿ, ರಾತ್ರಿಯಲ್ಲೂ ಅಥವಾ ಮೋಡಗಳು, ಮಳೆ, ಹೊಗೆ ಮತ್ತು ಕಾಡುಗಳ ಮೂಲಕವೂ ಅತ್ಯಂತ ಸಮರ್ಥವಾಗಿ ಚಿತ್ರಗಳನ್ನು ಸೆರೆಹಿಡಿಯುವಲ್ಲಿ ಸೂಕ್ಷ್ಮವಾಗಿ ಕಾರ್ಯನಿರ್ವಹಿಸುತ್ತದೆ. ನಿಸಾರ್‌ನ ಮತ್ತೊಂದು ವಿಶೇಷತೆ ಏನೆಂದರೆ, ಇದು ಎರಡು ರೀತಿಯ ರೇಡಾರ್ ಬ್ಯಾಂಡ್‌ಗಳನ್ನು ಒಟ್ಟಿಗೆ ಬಳಸಿದ ಮೊದಲ ಉಪಗ್ರಹವಾಗಿದೆ.


ಮುಂದುವರೆದು ಭೂಕಂಪಗಳು, ಭೂಕುಸಿತಗಳು, ಪ್ರವಾಹಗಳು ಮತ್ತು ಜ್ವಾಲಾಮುಖಿ ಸ್ಫೋಟಗಳು, ಹವಾಮಾನ ಬದಲಾವಣೆಯಿಂದಾಗಿ ಕರಗುತ್ತಿರುವ ಹಿಮನದಿಗಳು ಮತ್ತು ಮಂಜುಗಡ್ಡೆಯ ಪದರಗಳು, ಬೆಳೆಯುತ್ತಿರುವ ಅಥವಾ ಕುಗ್ಗುತ್ತಿರುವ ಅರಣ್ಯಗಳು ಮತ್ತು ಜೌಗು ಪ್ರದೇಶಗಳು ಪತ್ತೆ ಮಾಡಿ, ಈ ಮಾಹಿತಿಯು ವಿಪತ್ತುಗಳ ಸಮಯದಲ್ಲಿ ತುರ್ತು ರಕ್ಷಣಾ ಕಾರ್ಯಕರ್ತರಿಗೆ ತ್ವರಿತವಾಗಿ ಕ್ರಮ ಕೈಗೊಳ್ಳಲು ರವಾನಿಸಿ ಸಹಾಯ ಮಾಡುತ್ತದೆ ಹಾಗೂ ಭೂಮಿಯ ಪರಿಸರದಲ್ಲಿನ ದೀರ್ಘಾವಧಿಯ ಬದಲಾವಣೆಗಳನ್ನು ಪತ್ತೆಹಚ್ಚಲು ವಿಜ್ಞಾನಿಗಳಿಗೆ ನೆರವಾಗುತ್ತದೆ.

ಇದೆ ಜುಲೈ 30 ರಂದು ಉಡಾವಣೆಗೊಂಡು ಭೂ ಕಕ್ಷೆ ತಲುಪುವ ಈ ನಿಸಾರ್ ಅನ್ನು ಭೂಮಿಯಿಂದ ಸುಮಾರು 747 ಕಿಲೋಮೀಟರ್ ಎತ್ತರದಲ್ಲಿ ಸೂರ್ಯ–ಸಿಂಕ್ರೊನಸ್ ಕಕ್ಷೆಯಲ್ಲಿ ಇರಿಸ ಲಾಗುತ್ತದೆ. ಬಾಹ್ಯಾಕಾಶವನ್ನು ತಲುಪಿದ ನಂತರ, ಆಂಟೆನಾ ಒಂದು ನಿಯೋಜಿಸಬಹು ದಾದ ಬೂಮ್ ಅನ್ನು ಬಳಸಿ ಛತ್ರಿಯಂತೆ ತೆರೆದು ಕೊಳ್ಳುತ್ತದೆ. ಈ ವಿಶೇಷ ಕಾರ್ಯವಿಧಾನವು ಬಾಹ್ಯಾಕಾಶದಲ್ಲಿ ಆಂಟೆನಾವನ್ನು ಎಚ್ಚರಿಕೆಯಿಂದ ತೆರೆಯುತ್ತದೆ ಮತ್ತು ವಿಸ್ತರಿಸುತ್ತದೆ, ಇದು ಭೂಮಿಯ ವಿಶಾಲ ಪ್ರದೇಶಗಳಲ್ಲಿ ರೇಡಾರ್ ಸಂಕೇತಗಳನ್ನು ಕಳುಹಿಸಲು ಮತ್ತು ಸ್ವೀಕರಿಸಲು ಅನುವು ಮಾಡಿಕೊಡುತ್ತದೆ. ಇದು ಭೂ ಚಲನೆ ಅಥವಾ ಹಿಮನದಿ ಕರಗುವಿಕೆಯಂತಹ ನಿಧಾನ ಬದಲಾವಣೆಗಳನ್ನು ಪತ್ತೆಹಚ್ಚಲು ಸೂಕ್ತವಾದ ರ್‍ಯಾಡರ್ ಹೊಂದಿರುತ್ತದೆ. ನಿಸಾರ್ ಪ್ರತಿ 98.5 ನಿಮಿಷಗಳಿಗೊಮ್ಮೆ ಭೂಮಿಯನ್ನು ಸುತ್ತುತ್ತದೆ ಮತ್ತು ಪ್ರತಿ 12 ದಿನಗಳಿಗೊಮ್ಮೆ ಪ್ರತಿ ಪ್ರದೇಶವನ್ನು ಎರಡು ಬಾರಿ ಸ್ಕ್ಯಾನ್ ಮಾಡುತ್ತದೆ – ಒಮ್ಮೆ ದಕ್ಷಿಣದಿಂದ ಉತ್ತರಕ್ಕೆ ಹೋಗುವಾಗ (ಏರುವ ಮಾರ್ಗ) ಮತ್ತು ಒಮ್ಮೆ ಉತ್ತರದಿಂದ ದಕ್ಷಿಣಕ್ಕೆ ಹೋಗುವಾಗ (ಇಳಿಯುವ ಮಾರ್ಗ) ಮಾರ್ಗವನ್ನು ಅನುಸರಿಸುತ್ತದೆ. ಇದರರ್ಥ ಪ್ರತಿ 6 ದಿನಗಳಿಗೊಮ್ಮೆ ಪ್ರತಿ ಸ್ಥಳವನ್ನು ನಿಖರವಾಗಿ ಪರಿಶೀಲಿಸಲಾಗುತ್ತದೆ.

ನಿಸಾರ್‌ನ ಡೇಟಾ (ದತ್ತಾಂಶ ಮಾಹಿತಿ) ಅನೇಕ ಕ್ಷೇತ್ರಗಳಿಗೆ ಪ್ರಯೋಜನವನ್ನು ನೀಡುತ್ತದೆ: ವಿಜ್ಞಾನಿಗಳು ಇದರಿಂದ ಹವಾಮಾನ, ವಿಪತ್ತುಗಳು ಮತ್ತು ಪರಿಸರ ವ್ಯವಸ್ಥೆಗಳನ್ನು ಅಧ್ಯಯನ ಮಾಡುತ್ತಾರೆ. ರೈತರು ಮಣ್ಣಿನ ತೇವಾಂಶ ಮತ್ತು ಬೆಳೆ ಆರೋಗ್ಯವನ್ನು ಮೇಲ್ವಿಚಾರಣೆ ಮಾಡಬಹುದು, ಜಲ ನಿರ್ವಾಹಕರು ನದಿಗಳು, ಸರೋವರಗಳು ಮತ್ತು ಬರಗಾಲಗಳನ್ನು ಪತ್ತೆಹಚ್ಚಬಹುದು. ನಗರ ಯೋಜಕರು ಭೂಕುಸಿತ ಅಥವಾ ಶಿಫ್ಟಿಂಗ್ ಅನ್ನು ಗಮನಿಸಬಹುದು ಎಲ್ಲಕ್ಕಿಂತ ಹೆಚ್ಚಾಗಿ, ಈ ಡೇಟಾವನ್ನು ನಾಸಾ ಆನ್‌ಲೈನ್‌ನಲ್ಲಿ ಉಚಿತವಾಗಿ ಹಂಚಿಕೊಳ್ಳುತ್ತದೆ, ಆದ್ದರಿಂದ ವಿಜ್ಞಾನಿಗಳಿಂದ ವಿದ್ಯಾರ್ಥಿಗಳವರೆಗೆ ಹಾಗೂ ನೀತಿ ನಿರೂಪಕರವರೆಗೆ ಯಾರು ಬೇಕಾದರೂ ಈ ಬಾಹ್ಯಾಕಾಶ ಮಾಹಿತಿಯನ್ನು ತಮ್ಮ ಅಗತ್ಯಗಳಿಗೆ ಅನುಗುಣವಾಗಿ ಬಳಸಬಹುದು.

ನಿಸಾರ್ ಉಪಗ್ರಹವನ್ನು ಜುಲೈ 30ರಂದು ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್‌ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆ ಮಾಡಲಾಗುತ್ತದೆ. ಇದನ್ನು ಇಸ್ರೋ–ನಿರ್ಮಿತ ಜಿಎಸ್‌ಎಲ್‌ವಿ ಮಾರ್ಕ್ II ರಾಕೆಟ್‌ನಲ್ಲಿ ಬಾಹ್ಯಾಕಾಶಕ್ಕೆ ಕಳುಹಿಸಲಾಗುತ್ತದೆ. ಉಪಗ್ರಹವು ಸುಮಾರು 3 ಟನ್‌ಗಳಷ್ಟು ತೂಕವನ್ನು ಹೊಂದಿದೆ ಮತ್ತು ಬಾಹ್ಯಾಕಾಶದಲ್ಲಿ ಕನಿಷ್ಠ ಮೂರು ವರ್ಷಗಳ ಕಾಲ ಕಾರ್ಯನಿರ್ವಹಿಸುತ್ತದೆ.

ನಿಸಾರ್ ರೇಡಾರ್ ಉಪಗ್ರಹ ಕಲ್ಪನೆಯು 2007ರಲ್ಲಿ ಪ್ರಾರಂಭವಾಯಿತು, ನಾಸಾ ಐ–ಬ್ಯಾಂಡ್ ಬಳಸುವ ಹೊಸ ರೇಡಾರ್ ಉಪಗ್ರಹವನ್ನು ಪ್ರಸ್ತಾಪಿಸಿದಾಗ ಈ ಯೋಜನೆ ಸ್ಪಷ್ಟರೂಪ ಪಡೆಯಿತು. ಅದೇ ಸಮಯದಲ್ಲಿ, ಇಸ್ರೋಎಸ್–ಬ್ಯಾಂಡ್ ಬಳಸುವ ಒಂದನ್ನು ವಿನ್ಯಾಸಗೊಳಿಸುತ್ತಿತ್ತು. 2014ರಲ್ಲಿ, ಎರಡೂ ರೇಡಾರ್‌ಗಳನ್ನು ಹೊತ್ತು ಒಂದು ಶಕ್ತಿಶಾಲಿ ಉಪಗ್ರಹವನ್ನು ಮಾಡಲು ಉಭಯ ದೇಶಗಳ ವಿಜ್ಞಾನಿಗಳು ಕೈಜೋಡಿಸಿದರು. ಅಂದಿನಿಂದ, ನಿಸಾರ್ ಉಪಗ್ರಹವನ್ನು ಕಾರ್ಯರೂಪಕ್ಕೆ ತರಲು ನಾಸಾ ಮತ್ತು ಇಸ್ರೋ ನಿಕಟವಾಗಿ ಕೆಲಸ ಮಾಡಿವೆ. ನಿಸಾರ್ ನಿರ್ಮಾಣಕ್ಕೆ ಸುಮಾರು 1.5 ಶತಕೋಟಿ ಡಾಲರ್ (12,500 ಕೋಟಿ ರೂ.ಗಳ) ವೆಚ್ಚವಾಗಿರುತ್ತದೆ.




ನೈಸರ್ಗಿಕ ವಿಕೋಪಗಳು, ಹವಾಮಾನ ಬದಲಾವಣೆ ಮತ್ತು ಹಿಮನದಿಗಳು, ಭೂಕಂಪಗಳು, ಜ್ವಾಲಾಮುಖಿಗಳು, ಪ್ರವಾಹಗಳು, ಕ್ಷಾಮಗಳು, ನಗರ ಪ್ರದೇಶಗಳ ಭೂಮಿಯ ಅಳದಲ್ಲಿ ಅಡಗಿರುವ ಮತ್ತು ಯಾವುದೇ ಕ್ಷಣದಲ್ಲಿ ಘೋರ ವಿಪತ್ತಿಗೆ ಕಾರಣ ವಾಗುವ ಮಾನವ ನಿರ್ಮಿತ ದುರಂತಗಳು ಇತ್ಯಾದಿಗಳ ಬಗ್ಗೆ ಮುನ್ಸೂಚನೆ ಮತ್ತು ಮುನ್ನೆಚ್ಚರಿಕೆ ನೀಡುವುದಲ್ಲದೆ, ಪರಿಸರ ವ್ಯವಸ್ಥೆಗಳು, ಬೆಳೆಗಳು ಮತ್ತು ಜಲ ಸಂಪನ್ಮೂಲಗಳನ್ನು ಅಧ್ಯಯನ ಮಾಡಲು ಕೂಡ ಸಹಾಯ ಮಾಡುತ್ತದೆ. ಒಟ್ಟಾರೆ ಇದು ಅಂತರಿಕ್ಷದಿಂದ ಭೂಮಿಯ ಮೇಲೆ ಸುರಕ್ಷಿತ ಕಣ್ಗಾವಲು.

ಈ ವಿಷಯದ ಬಗ್ಗೆ ನಾಸಾ ಬಿಡುಗಡೆ ಮಾಡಿದ ವಿಶೇಷ ವಿಡಿಯೋ ನೋಡಿ ಆನಂದಿಸಿ ಯೂಟ್ಯೂಬ್‌ನಲ್ಲಿ ಲಭ್ಯವಿರುತ್ತದೆ.



# ಫುಡ್ ಹ್ಯಾಬಿಟ್ಸ್



ಪರಸ್ಪರ ನಿಶಿದ್ಧ ಆಹಾರ ಎಂದರೇನು ಯಾವ ಆಹಾರಗಳು ಪರಸ್ಪರ ನಿಶಿದ್ಧ, ಯಾವ ಆಹಾರವನ್ನು ಸೇವನೆ ಮಾಡಬಾರದು ಎಂದು ತಿಳಿಯೋಣ. ಆರೋಗ್ಯ ಪದ್ಧತಿಯಲ್ಲಿ ಪುರಾತನ ಕಾಲದಿಂದಲೂ ಇಂದಿಗೂ ನಡೆದುಕೊಂಡು ಬಂದಿರುವ ಪದ್ಧತಿ ಎಂದರೆ ಅದು ಆಯುರ್ವೇದ. ಆಯುರ್ವೇದದ ಪ್ರಕಾರ ವಿರುದ್ಧ ಸ್ವಭಾವವಿರುವ ಆಹಾರ ಪದಾರ್ಥಗಳನ್ನು, ಪರಸ್ಪರ ನಿಶಿದ್ಧ, ಅಂದರೆ ವಿರುದ್ಧ ಆಹಾರ ಎಂದು ಕರೆಯುತ್ತಾರೆ, ಈ ಆಹಾರಗಳನ್ನು ಸೇವಿಸಬೇಕಿದ್ದರೆ, ರುಚಿಯಾಗಿದ್ದರೂ, ದೇಹಕ್ಕೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಜೀರ್ಣಶಕ್ತಿ ಕಡಿಮೆಯಾಗಿ. ಜಠರದ ಸಮಸ್ಯೆಗೂ ಕಾರಣ ಆಗುತ್ತವೆ. ಹೊರಗಿನ ವಾತಾವರಣದಲ್ಲಿ ಬೆಂಕಿ ಹೊತ್ತಿಕೊಂಡಾಗ ಬೆಂಕಿಯನ್ನು ಆರಿಸಲು ಹೇಗೆ ನೀರನ್ನು ಬಳಸುತ್ತೇವೋ, ನಮ್ಮ ದೇಹದಲ್ಲಿ ಜೀರ್ಣಕ್ರಿಯೆಯೂ ಇದೇ ರೀತಿ ಕೆಲಸ ಮಾಡುತ್ತದೆ. ಅಂದರೆ, ಹೊರಗಿನ ಬೆಂಕಿಗೆ ನಾವು ಎಣ್ಣೆ ಅಥವಾ ತುಪ್ಪ ಸುರಿದರೆ, ಅದು ಹೇಗೆ ಮತ್ತಷ್ಟು ಹೊತ್ತಿ ಉರಿಯುವುದೋ ಅದೇ ರೀತಿ ನಮ್ಮ ದೇಹದಲ್ಲಿ ಜೀರ್ಣಕ್ರಿಯೆ ಚುರುಕಾಗಿ ನಡೆಯಬೇಕೆಂದು, ಸಮರ್ಪಕವಾದ ಆಹಾರಗಳನ್ನು ಸೇವಿಸಬೇಕು. ಇಲ್ಲದಿದ್ದರೆ ಜೀರ್ಣಕ್ರಿಯೆಯು ನಿಧಾನವಾಗಿ, ದೇಹದಲ್ಲಿ ವಿಷಕಾರಿ ಅಂಶಗಳು ಉತ್ಪತ್ತಿಗೊಂಡು, ಆರೋಗ್ಯ ಹದಗೆಡುತ್ತದ ಹಾಗಾಗಿ ವಿರುದ್ಧ ರೀತಿಯ ಆಹಾರ ಪದಾರ್ಥಗಳನ್ನು ಯಾವತ್ತೂ ಒಮ್ಮೆಲೇ ಸೇವಿಸಬಾರದು.

**ಪರಸ್ಪರ/ವಿರುದ್ಧ ನಿಶಿದ್ಧ ಆಹಾರಗಳು**

* ತುಳಸಿಯೊಂದಿಗೆ ಹಾಲು ಸೇವಿಸಬಾರದು.

* ಸಿಹಿ ಆಹಾರದೊಂದಿಗೆ ಮೂಲಂಗಿ ಮೆಂತೆ ಸೊಪ್ಪು ಸೇವಿಸಬಾರದು.

* ಹಸಿ ತರಕಾರಿಯೊಂದಿಗೆ ಸಿಹಿ ಪದಾರ್ಥ ಸೇವಿಸಬಾರದು.

* ನೇರಳೆ ಹಣ್ಣು ತಿಂದಾಗ ಮೊಸರು ಮಜ್ಜಿಗೆ ಸೇವಿಸಬಾರದು.

* ಹಾಲಿನ ಜೊತೆ ಉಪ್ಪನ್ನು ಸೇವಿಸಬಾರದು.

* ಬಿಸಿ ಅಡುಗೆ ಹಾಗೂ ತಂಗಳು ಅಡಿಗೆ ಒಟ್ಟಿಗೆ ಸೇವಿಸಬಾರದು.

* ಮೊಸರು ಮಜ್ಜಿಗೆ ಬೆಣ್ಣೆ ಪಂಚ ಲೋಹದ ಪಾತ್ರೆಯಲ್ಲಿಟ್ಟು ಸೇವಿಸಬಾರದು.

* ಜೇನುತುಪ್ಪ ಹಾಗೂ ಹಸಿ ತರಕಾರಿ ಒಮ್ಮೆಲೇ ಯಾವುದೇ ಕಾರಣಕ್ಕೂ ಸೇವಿಸಬಾರದು.

* ಸಿಹಿ ಆಹಾರದೊಂದಿಗೆ ಈರುಳ್ಳಿ ಸೇವಿಸಬಾರದು.

* ಮೊಸರು ಮಜ್ಜಿಗೆ ಜೊತೆ ಬಾಳೆಹಣ್ಣು ಎಂದಿಗೂ ಸೇವಿಸಬಾರದು.

* ಹಸಿ ತರಕಾರಿಯೊಂದಿಗೆ ಬೆಣ್ಣೆ ಸೇವಿಸಬಾರದು.

* ಅನ್ನದ ಜೊತೆಗೆ ಹಣ್ಣು ತಿನ್ನಬಾರದು.

* ಮೂಲಂಗಿ ನುಗ್ಗೆಕಾಯಿಯೊಂದಿಗೆ ಹಾಲು ಸೇವಿಸಬಾರದು.

* ಯಾವುದೇ ಹುಳಿ ಸೇವಿಸಿದ ನಂತರ ಹಾಲನ್ನು ಕುಡಿಯಬಾರದು.

* ಮಜ್ಜಿಗೆ ಹಾಗೂ ಮೊಸರಿನ ಜೊತೆ ತುಪ್ಪು ಸೇವಿಸಬಾರದು.

* ಮೂಲಂಗಿ ಮತ್ತು ಉದ್ದಿನ ಬೇಳೆಯನ್ನು ಒಟ್ಟಿಗೆ ಸೇವಿಸಬಾರದು.

* ಬಾಳೆಹಣ್ಣನ್ನು ಎಂದಿಗೂ ಹಾಲಿನ ಜೊತೆ ಸೇವಿಸುವುದು ಒಳಿತಲ್ಲ.

* ಮೊಸರು ಮತ್ತು ಚೀಸ್ ಅನ್ನು ಒಟ್ಟಿಗೆ ಸೇವಿಸಬಾರದು ಮಲಬದ್ಧತೆ ಉಂಟಾಗುತ್ತದೆ.

* ಸಮಪ್ರಮಾಣದಲ್ಲಿ ಜೇನುತುಪ್ಪ ಹಾಗೂ ತುಪ್ಪವನ್ನು ಒಟ್ಟಿಗೆ ಸೇವನೆ ಮಾಡುವುದು ಒಳ್ಳೆಯದಲ್ಲ.

* ಜೇನುತುಪ್ಪವನ್ನು ಬಿಸಿ ಮಾಡಿ ಸೇವಿಸಬಾರದು.

* ಚಹಾ ಕುಡಿದ ತಕ್ಷಣ ಮೊಸರನ್ನು ಸೇವಿಸಬಾರದು.

* ಹುಳಿ ಮತ್ತು ಸಿಹಿ ಹಣ್ಣುಗಳನ್ನು ಒಟ್ಟಿಗೆ ತಿನ್ನಬಾರದು.

* ಉದ್ದಿನಬೇಳೆ ಮತ್ತು ಮೊಸರನ್ನು ಸೇವಿಸಬಾರದು.

* ಪೈನಾಪಲ್ ಜೊತೆ ಹಾಲನ್ನು ಸೇವಿಸಬಾರದು.

* ಚಹಾ ಅಥವಾ ಕಾಫಿಯ ನಂತರ ತಕ್ಷಣ ತಣ್ಣೀರನ್ನು ಸೇವಿಸಬಾರದು.

* ಜೇನುತುಪ್ಪದ ಜೊತೆ ಮೂಲಂಗಿ ದ್ರಾಕ್ಷಿ ಒಟ್ಟಿಗೆ ತಿನ್ನಬಾರದು

* ಊಟ ಆದ ತಕ್ಷಣ ಕಾಫಿ ಟೀ ಅಥವಾ ಜ್ಯೂಸನ್ನು ಕುಡಿಯಬಾರದು.

* ಮಜ್ಜಿಗೆಯ ಜೊತೆ ತುಪ್ಪವನ್ನು ಸೇವಿಸಬಾರದು.

* ಯಾವುದೇ ಬಿಸಿ ಇರುವ ಆಹಾರವನ್ನು ಜೇನುತುಪ್ಪದ ಜೊತೆ ಸೇವಿಸಬಾರದು.

* ಖಾರ ಪದಾರ್ಥಗಳನ್ನು ಹಾಲಿನೊಂದಿಗೆ ಸೇವಿಸಬಾರದು.

* ಕುದಿಯುವ ನೀರಿಗೆ ಜೇನುತುಪ್ಪ ಸೇವಿಸಬಾರದು.

* ಪಾಯಸದ ಜೊತೆ ಹುಳಿ ಪದಾರ್ಥವನ್ನು ಸೇವಿಸಬೇಡಿ.

* ಕಡಲೆಕಾಯಿ ತಿಂದ ನಂತರ ನೀರು ಕುಡಿಯಬಾರದು.

* ಈ ಆಹಾರ ಪದಾರ್ಥಗಳನ್ನು ರುಚಿಗೋಸ್ಕರ ಸೇವಿಸುವುದಾದರೆ, ಅಂದರೆ, ಮೊಸರು ಮತ್ತು ಜೇನುತುಪ್ಪ ಸೇವನೆ ಮಾಡಬಾರದು.

* ಆದರೆ ಪಂಚಾಮೃತವನ್ನು ಮೊಸರು ಮತ್ತು ಜೇನುತುಪ್ಪವನ್ನು ಸೇರಿಸಿ ತಯಾರಿಸಲಾಗುತ್ತದೆ.

* ಪಂಚಾಮೃತವನ್ನು ಪ್ರಸಾದದ ರೂಪದಲ್ಲಿ ಹೇಗೆ ಸೇವಿಸುತ್ತೇವೋ ಅದೇ ರೀತಿ ಯಾವಾಗಾದರೂ ಒಮ್ಮೆ ರುಚಿಗೋಸ್ಕರ ಕಡಿಮೆ ಪ್ರಮಾಣದಲ್ಲಿ ಸೇವಿಸಬಹುದು, ಅತಿಯಾದ ಸೇವನೆ ಆರೋಗ್ಯಕ್ಕೆ ಒಳ್ಳೆಯದಲ್ಲ.

* ಇವೆಲ್ಲವೂ ಪರಸ್ಪರ ನಿಶಿದ್ಧ ಆಹಾರಗಳು ಇವುಗಳನ್ನು ಸೇವನೆ ಮಾಡುವುದರಿಂದ ಜೀರ್ಣಶಕ್ತಿ ಹಾಳಾಗಿ, ಜೀರ್ಣಕ್ರಿಯೆ ನಿಧಾನವಾಗುತ್ತದೆ ಇದರಿಂದ ಅಜೀರ್ಣ ಸಮಸ್ಯೆ, ಮಲಬದ್ಧತೆ, ಹೊಟ್ಟೆ ನೋವು ಇನ್ನು ಮುಂತಾದ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತದೆ.

ಮೇಲೆ ಹೇಳಿದ ಪರಸ್ಪರ ನಿಷಿದ್ಧ ಆಹಾರ ಪದಾರ್ಥಗಳನ್ನು ಗಮನಿಸಿ ದಿನನಿತ್ಯ ಆಹಾರ ಸೇವನೆ ಮಾಡಿದರೆ ನಮ್ಮ ಆರೋಗ್ಯ ಅರ್ಧದಷ್ಟು ಸುಧಾರಿಸುವುದು.

# ಪಿಯು ವಿದ್ಯಾರ್ಥಿನಿ ಅರ್ಚಕರ ಕುಟುಂಬದ ಮೊದಲ ಮಹಿಳಾ ಪುರೋಹಿತೆ ಅನಘ

ದಕ್ಷಿಣ ಕನ್ನಡದ ಅನಘಾ ಭಟ್ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯಾಗಿದ್ದಾಗಲೇ ತಮ್ಮ ಪುರೋಹಿತರ (ಹಿಂದೂ ಅರ್ಚಕರು) ಕುಟುಂಬದಲ್ಲಿ ಪೌರೋಹಿತ್ಯ ಕರ್ತವ್ಯಗಳನ್ನು ನಿರ್ವಹಿಸಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರದಾರದು ಅವರು ತಮ್ಮ ತಂದೆಯೊಂದಿಗೆ ಮದುವೆಗಳನ್ನು ನೆರವೇರಿಸುವಲ್ಲಿ ಮತ್ತು ಇತರ ಧಾರ್ಮಿಕ ವಿಧಿಗಳನ್ನು ನಿರ್ವಹಿಸುವಲ್ಲಿ ಸಹಾಯ ಮಾಡುತ್ತಾರೆ. ಅನಘಾ ಅವರಿಗೆ ತಮ್ಮ ತಂದೆಯಿಂದ ಸಂಸ್ಕೃತ ಮತ್ತು ವೇದಗಳನ್ನು ಕಲಿಯಲು ಪ್ರೋತ್ಸಾಹ ದೊರೆತಿದೆ, ಅವರು ಋಗ್ವೇದದ 15 ಸೂಕ್ತಗಳನ್ನು ಮತ್ತು ಯಜುರ್ವೇದದ ರುದ್ರಪಾಟವನ್ನು ಕಲಿತಿದ್ದಾರೆ.

ಮಹಿಳೆಯರು ಪುರುಷರಿಗೆ ಸರಿ ಸಮಾನವಾಗಿ ಎಲ್ಲ ಕ್ಷೇತ್ರಗಳಲ್ಲೂ ಮುಂದಿದ್ದಾರೆ. ಈ ವಿಷಯದಲ್ಲಿ ವನಿತೆಯರ ಸಾಧನೆ ಬಹು ದೊಡ್ಡದು. ಸಾಧನೆಯಲ್ಲಿ ಮಹಿಳೆಯರಿಗೆ ಯಾವ ಕ್ಷೇತ್ರವೂ ಹೊರತಲ್ಲ. ಪುರಾತನ ಕಾಲದಿಂದಲೂ ಪುರುಷರಿಗಷ್ಟೇ ಸೀಮಿತವಾಗಿ ಪೌರಹಿತ್ಯದಲ್ಲೂ ಈಗ ಮಹಿಳೆಯರೂ ಗುರುತಿಸಿಕೊಂಡಿದ್ದಾರೆ. ಮೈಸೂರಿನ ಡಾ. ಪಿ. ಭ್ರಮರಾಂಭ ಮಹೇಶ್ವರಿ ಅವರಿ ದೇಶದ ಪ್ರಥಮ ಮಹಿಳಾ ಪುರೋಹಿತೆಯಾಗಿ ಗಮನ ಸೆಳೆದಿದ್ದಾರೆ. ಇವರು 30 ವರ್ಷಗಳಲ್ಲಿ ಐದು ಸಾವಿರಕ್ಕೂ ಹೆಚ್ಚು ಪೌರಹಿತ್ಯಗಳನ್ನು ಮಾಡಿದ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ.

ಚಿತ್ರಾಂಗದಾ ಸತರೂಪ ಅವರು ಪಶ್ಚಿಮ ಬಂಗಾಳದಲ್ಲಿ ಕನ್ಯಾದಾನವಿಲ್ಲದೆ ಮದುವೆ ಮಾಡಿಸುವ ಮೊದಲ ಮಹಿಳಾ ಪುರೋಹಿತೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮನೀಶಾ ಶೆಟ್ ಕೂಡಾ ಪುರೋಹಿತೆಯಾಗಿ ಕೆಲಸ ಮಾಡುತ್ತಿರುವ ಇನ್ನೊರ್ವ ಮಹಿಳೆ. ಪುಣೆ ಮೂಲದ ಮನಿಶಾ ಭಟ್ ಕಳೆದ 20 ವರ್ಷಗಳಿಂದ ಪೌರಹಿತ್ಯ ಮಾಡುತ್ತಾ ಗಮನ ಸೆಳೆದಿದ್ದಾರೆ. ಈಗ ಈ ಸಾಲಿಗೆ ಮತ್ತೊಂದು ಸೇರ್ಪಡೆ ಕರ್ನಾಟಕದ ಅನಘ ಭಟ್

ದಕ್ಷಿಣ ಕನ್ನಡ ಜಿಲ್ಲೆಯ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯಾಗಿದ್ದಾಗಲೇ ಅನಘ ಭಟ್ ಪುರೋಹಿತರ ಕುಟುಂಬದಲ್ಲಿ ಮದುವೆ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಪೌರೋಹಿತ್ಯ ಕರ್ತವ್ಯಗಳನ್ನು ನಿರ್ವಹಿಸಿದ ಮೊದಲ ಮಹಿಳೆಯಾಗಿದ್ದಾರೆ.

ಶಾಸ್ತ್ರಗಳಲ್ಲಿ ಯಾವುದೇ ನಿಷೇಧವಿಲ್ಲದಿದ್ದರೂ, ದೇವಾಲಯಗಳು ಅಥವಾ ಇತರ ಧಾರ್ಮಿಕ ವೇದಿಕೆಗಳಲ್ಲಿ ಮಹಿಳಾ ಪುರೋಹಿತರನ್ನು ನೋಡುವುದು ಅಪರೂಪ. ಆದರೆ, ಬಂಟ್ವಾಳ ತಾಲೂಕಿನ ದಾಸಕೋಡಿ ಗ್ರಾಮದ ಅನಘ ಭಟ್ ಅವರಿಗೆ 17ನೇ ವಯಸ್ಸಿನಲ್ಲೇ ಈ ಮಾರ್ಗವು ಸುಲಭವಾಗಿತ್ತು, ಏಕೆಂದರೆ ಅವರ ತಂದೆ ಮತ್ತು ಪುರೋಹಿತ ರಾದ ಕಾಶಿಕೋಡಿ ಸೂರ್ಯನಾರಾಯಣಭಟ್ ಅವರು ಸಂಸ್ಕೃತ ಮತ್ತು ವೇದಗಳನ್ನು ಕಲಿಯಲು ಪ್ರೋತ್ಸಾಹಿಸಿದರು ಮತ್ತು ಪುರೋಹಿತರಾಗಲು ಸಹಾಯ ಮಾಡಿದರು.

ವಾಸ್ತವವಾಗಿ, ಅವರ ಅಜ್ಜ ಗುರುವಾಯೂರೇ ಭಟ್ ಅವರು ಚಿಕ್ಕ ವಯಸ್ಸಿನಲ್ಲಿ ಅನಘಾಗೆ ವೇದಗಳನ್ನು ಕಲಿಯಲು ಏಕೆ ಆಸಕ್ತಿ ಇಲ್ಲ ಎಂದು ಪದೇ ಪದೇ ಕೇಳುತ್ತಿದ್ದರು. ವರ್ಷಗಳ ನಂತರ, ಅವರು ತಮ್ಮ ಅಜ್ಜನ ಆಸೆಯನ್ನು ಪೂರೈಸಿದರು ಮತ್ತು ತಮ್ಮ ತಂದೆಯಿಂದ ವೇದಗಳನ್ನು ಕಲಿತರು. ಅವರು ಪಿಯುಸಿ ವಿದ್ಯಾರ್ಥಿನಿಯಾಗಿದ್ದಾಗಲೇ ತಮ್ಮ ತಂದೆಗೆ ಮದುವೆಗಳನ್ನು ನೆರವೇರಿಸುವಲ್ಲಿ ಮತ್ತು ಇತರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ವಿಧಿಗಳನ್ನು ನಿರ್ವಹಿಸುವಲ್ಲಿ ಸಹಾಯ ಮಾಡುತ್ತಿದ್ದರ ಜೊತೆಗೆ ತಮ್ಮ ತಂದೆಯ ಮಾರ್ಗದರ್ಶನದಲ್ಲಿ ಸ್ವತಂತ್ರ ಪುರೋಹಿತರಾಗಿ ಧಾರ್ಮಿಕ ಕೈಂಕರ್ಯಗಳನ್ನು ನೆರವೇರಿಸುತ್ತಿದ್ದಾರೆ.



ನಾನು ವಿದ್ಯಾರ್ಥಿನಿಯಾಗಿದ್ದಾಗಲೇ ಧಾರ್ಮಿಕ ಕಾರ್ಯಕ್ರಮಗಳಲ್ಲಿ ವಿಧಿಗಳನ್ನು ಮುನ್ನಡೆಸಲು ಜನರು ಒತ್ತಾಯಿಸುತ್ತಿದ್ದರು. ನನಗೆ ಅತ್ಯಂತ ಸಂತೋಷವಾಯಿತು" ಎಂದು ಅನಘ ಭಟ್ ಹೇಳಿದರು. "ನಾನು ಪುರೋಹಿತರ ಕುಟುಂಬದಲ್ಲಿ ಹುಟ್ಟಿ ಬೆಳೆದಿದ್ದೇನೆ. ನಮ್ಮ ಕುಟುಂಬದಲ್ಲಿ ಎಲ್ಲರೂ, ಯಾವುದೇ ಅಪವಾದವಿಲ್ಲದೆ, ಸಂಸ್ಕೃತ, ವೇದಗಳನ್ನು ಕಲಿಯಲು ಮತ್ತು ಪುರೋಹಿತರಾಗಲು ನನಗೆ ಪ್ರೋತ್ಸಾಹಿಸಿದರು. ನಾನು ನನ್ನ ತಂದೆಯಿಂದ ಋಗ್ವೇದದ 15 ಸೂಕ್ತಗಳನ್ನು ಮತ್ತು ಯಜುರ್ವೇದದ ರುದ್ರಪಾಠವನ್ನು ಕಲಿತಿದ್ದೇನೆ" ಎಂದುತಮ್ಮ ಪೌರಹಿತ್ಯದ ಸಾಧನೆಯನ್ನು ವಿವರಿಸಿದ್ದಾರೆ.


ಅವರ ತಂದೆ ಸೂರ್ಯನಾರಾಯಣ ಭಟ್, ಮಹಿಳೆಯರು ವೇದಗಳು ಮತ್ತು ಇತರ ವಿಧಿಗಳನ್ನು ಕಲಿಯಲು ಯಾವುದೇ ನಿರ್ಬಂಧಗಳಿಲ್ಲ ಎಂದು ಹೇಳಿದ್ದಾರೆ.

# ನಿಮ್ಮ ಹೃದಯವು ಒಬ್ಬಂಟಿಯಾಗಿ ಕಾರ್ಯನಿರ್ವಹಿಸುವುದಿಲ್ಲ

**ಜೀ**ವನ ಶೈಲಿಯ ಬದಲಾವಣೆ, ಐಷಾರಾಮಿ ಬದುಕು, ದೈಹಿಕ ಪರಿಶ್ರಮವಿಲ್ಲದ ವೃತ್ತಿ ಹಾಗೂ ಆರ್ಥಿಕ ಅಭಿವೃದ್ಧಿಯಿಂದ ಕಳೆದ 25 ವರ್ಷಗಳ ಅವಧಿಯಲ್ಲಿ ಭಾರತದಲ್ಲಿ ಹೃದ್ರೋಗ ಪ್ರಕರಣಗಳ ಸಂಖ್ಯೆ ಇಮ್ಮಡಿಯಾಗಿದೆ. ಈ ಮಾರಕ ರೋಗಗಳನ್ನು ತಡೆಗಟ್ಟಲು ಕೆಲವು ಸರಳ ಆರೋಗ್ಯ ಸಲಹೆ ಮತ್ತು ಮಾರ್ಗದರ್ಶನಗಳನ್ನು ಅನುಸರಿಸಿದರೆ, ನಿಮ್ಮ ಅಮೂಲ್ಯ ಮತ್ತು ಅದ್ಭುತ ಅಂಗವಾದ ಹೃದಯ ಆರೋಗ್ಯವಾಗಿರುತ್ತದೆ ಎಂಬುದನ್ನು ನೆನಪಿನಲ್ಲಿಡಿ.

ನಿಮ್ಮ ಹೃದಯವು ಒಬ್ಬಂಟಿಯಾಗಿ ಕಾರ್ಯನಿರ್ವಹಿಸುವುದಿಲ್ಲ. ನಿಮ್ಮ ಕಾಲುಗಳಲ್ಲಿ ಇನ್ನೊಂದು ಹೃದಯವೆಂಬ ಪರ್ಯಾಯ ಅಂಗವಿದೆ ಮತ್ತು ಅದನ್ನು ಸೋಲಿಯಸ್ ಎಂದು ಕರೆಯಲಾಗುತ್ತದೆ. ಈ ಆಳವಾದ, ನಿಶ್ಯಬ್ದ ಮತ್ತು ಸಾಮಾನ್ಯವಾಗಿ ಮರೆತು ಹೋದ ಸ್ನಾಯುವು ಸಹ ನಿಮಗಾಗಿ ಬಡಿಯುತ್ತದೆ ಮತ್ತು ವಿದ್ಯುತ್ ಪ್ರಚೋದನೆಗಳಿಂದಲ್ಲ, ಆದರೆ ಚಲನೆಯೊಂದಿಗೆ. ನೀವು ನಡೆಯುವಾಗ, ಮೆಟ್ಟಿಲುಗಳನ್ನು ಹತ್ತುವಾಗ ಅಥವಾ ನಿಮ್ಮ ಕಾಲ್ಬೆರಳುಗಳ ಮೇಲೆ ನಿಂತಾಗಲೆಲ್ಲಾ, ಸೋಲಿಯಸ್ ಸಕ್ರಿಯಗೊಳ್ಳುತ್ತದೆ. ಮತ್ತು ಅದು ಸಕ್ರಿಯಗೊಂಡಾಗ, ಅದು ಒಂದು ವೀರ ಯೋಧನಂತೆ ಕಾರ್ಯನಿರ್ವಹಿಸುತ್ತದೆ: ಇದು ಗುರುತ್ವಾಕರ್ಷಣೆಯನ್ನು ಧಿಕ್ಕರಿಸಿ, ನಿಮ್ಮ ಕಾಲುಗಳಿಂದ ಶುದ್ಧವಲ್ಲದ ರಕ್ತವನ್ನು ನಿಮ್ಮ ಹೃದಯಕ್ಕೆ ಹಿಂದಕ್ಕೆ ತಳ್ಳುತ್ತದೆ. ಅದಕ್ಕಾಗಿಯೇ ಇದನ್ನು "ಎರಡನೇ ಹೃದಯ" ಎಂದು ಕರೆಯಲಾಗುತ್ತದೆ.

ಈ ವಿವೇಚನಾಯುಕ್ತ ಅಂಗ ಎಲ್ಲಿದೆ? ಇದು ನಿಮ್ಮ ಕಾಲಿನ ಹಿಂಭಾಗದಲ್ಲಿ, ಗ್ಯಾಸ್ಟ್ರೋಕ್ನೆಮಿಯಸ್ (ಕರು ಸ್ನಾಯು) ಕೆಳಗೆ ಅಡಗಿದೆ. ಇದು ನಿರೋಧಕ. ಸದೃಢ. ನಿಮ್ಮ ನಿಷ್ಠಾವಂತ ಆರೋಗ್ಯ ಸೇವಕ. ಇದು ನಿಮ್ಮನ್ನು ಪೋಷಿಸಲು ಮಾಡಲ್ಪಟ್ಟಿದೆ... ಏಕೆಂದರೆ ನೀವು ಅದನ್ನು ಸಕ್ರಿಯಗೊಳಿಸಿದಾಗ:–ರಕ್ತ ಪರಿಚಲನೆಯನ್ನು ಸುಧಾರಿಸುತ್ತದೆ–ರಕ್ತ ಹೆಪ್ಪುಗಟ್ಟುವಿಕೆ ಮತ್ತು ಸಿರೆಯ ನಿಶ್ಚಲತೆಯನ್ನು ತಡೆಯುತ್ತದೆ– ಕಾಲಿನ ಊತವನ್ನು ಕಡಿಮೆ ಮಾಡುತ್ತದೆ– ನಿಮ್ಮ ಹೃದಯ ರಕ್ತನಾಳದ ಆರೋಗ್ಯವನ್ನು ರಕ್ಷಿಸುತ್ತದೆ. ಮತ್ತು ಉತ್ತಮ ಭಾಗ: ನೀವು ನಿಂತಿದ್ದಾಗಲೂ ಅದು ಕೆಲಸ ಮಾಡುತ್ತದೆ. ನೀವು ಅದಕ್ಕಾಗಿ ಏನು ಮಾಡಬಹುದು – ಕುಳಿತಾಗ ಅಥವಾ ನಿಂತಿರುವಾಗಲೂ ಅದಕ್ಕೆ ಚಲನೆಯನ್ನು ನೀಡಿ.




ಜೋಪಾನ, ಇದು ನಿಮ್ಮ ಅಮೂಲ್ಯ ಹೃದಯ

ನಿಮಗಾಗಿ, ನಿಮ್ಮ ಆಯಸ್ಸು ಇರುವವರೆಗೂ ಸತತವಾಗಿ ವಿಶ್ರಾಂತಿ ಇಲ್ಲದ ಕಾರ್ಯ ನಿರ್ವಹಿಸುವ ನಿಮ್ಮ ಅಮೂಲ್ಯ ಹೃದಯದ ಬಗ್ಗೆ ನೀವು ಕಾಳಜಿ ವಹಿಸಿದರೆ ಅದು ನಿಮ್ಮನ್ನು ಮತ್ತಷ್ಟು ಸುರಕ್ಷಿತವಾಗಿಡುತ್ತದೆ. ನಿಮ್ಮ ಅಮೂಲ್ಯ ಹೃದಯವನ್ನು ಜೋಪಾನ ಮಾಡುವ ಟಿಪ್ಸ್‌ಗಳು ಇಲ್ಲಿವೆ.

* **ಅರೋಗ್ಯಕರ ಆಹಾರ :** ಸಮತೋಲನ ಆಹಾರ ಸೇವಿಸಿ. ನಿಮ್ಮ ಹೃದಯ ಆರೋಗ್ಯಕರವಾಗಿ ಮತ್ತು ಸ್ವಾಸ್ಥ್ಯದಿಂದ ಇರಲು ತಾಜಾ ಹಣ್ಣುಗಳು ಮತ್ತು ತರಕಾರಿಗಳು ಹಾಗೂ ಧಾನ್ಯಗಳು, ಗೋಧಿ ಮತ್ತು ಅಕ್ಕಿಯಂಥ ಶರ್ಕರ ಪಿಷ್ಟ ಸಮೃದ್ಧ ಆಹಾರವನ್ನು ಸೇವಿಸಿ.

* **ಐಷಾರಾಮಿ ಜೀವನಶೈಲಿ:** ಐಷಾರಾಮಿ ಜೀವನ ಶೈಲಿಯಿಂದ ವಿಶ್ವಾದ್ಯಂತ ಶೇ.3ರಷ್ಟು ಕೊರೊನರಿ ಹೃದ್ರೋಗ ಹಾಗೂ ಶೇ.11ರಷ್ಟು ಪಾರ್ಶ್ವವಾಯು ಸಾವುಗಳು ಸಂಭವಿಸುತ್ತಿವೆ.

* **ಒತ್ತಡ ನಿರ್ವಹಣೆ:** ಒತ್ತಡವನ್ನು ನಿಯಂತ್ರಿಸಲು ಹಾಗೂ ಹೃದಯಾಘಾತದ ಗಂಡಾಂತರವನ್ನು ಕಡಿಮೆ ಮಾಡಲು ಆಳವಾದ ಉಸಿರಾಟ, ಯೋಗ ಹಾಗೂ ಧ್ಯಾನ ಮೂಲ ಮಂತ್ರಗಳಾಗಿವೆ.

* **ಸಾಕಷ್ಟು ನಿದ್ರೆ:** ನಿದ್ರಾಹೀನತೆಯಿಂದ ರಕ್ತದೊತ್ತಡ ಹಾಗೂ ಕೊಲೆಸ್ಟರಾಲ್ ಪ್ರಮಾಣ ಹೆಚ್ಚಾಗುತ್ತದೆ. ಇದು ಕೂಡ ಹೃದಯಕ್ಕೆ ಸಂಬಂಧಿಸಿದ ಗಂಡಾಂತರ ಮಟ್ಟಗಳನ್ನು ಹೆಚ್ಚಿಸುತ್ತದೆ. ನಿಮ್ಮ ಹೃದಯ ಅರೋಗ್ಯಕರವಾಗಿರಲು ರಾತ್ರಿ ವೇಳೆ 7–9 ಗಂಟೆಗಳ ನಿದ್ರೆಅಗತ್ಯ.

* **ಕೋಪ ನಿಯಂತ್ರಣ:** ಕೆಲವು ಆರೋಗ್ಯ ನಿಯತಕಾಲಿಕಗಳ ಪ್ರಕಾರ ಕೋಪ ಮತ್ತು ಒತ್ತಡವು ಹೃದಯ ಬಡಿತವನ್ನು ಹೆಚ್ಚಿಸುತ್ತದೆ ಹಾಗೂ ಕಾಲ ಕ್ರಮೇಣ ಇದು ಹೃದಯ ಸ್ತಂಭನಕ್ಕೆ ಕಾರಣವಾಗುತ್ತದೆ.

* **ಯಥೇಚ್ಚ ನೀರು ಸೇವನೆ:** ಪ್ರತಿ ದಿನ ಯಾರು 4–5 ಲೀಟರ್‌ಗಳಷ್ಟು ನೀರು ಕುಡಿಯುತ್ತಾರೋ ಅವರಿಗೆ ಹೃದಯಾಘಾತಗಳು ಸಂಭವಿಸುವ ಸಾಧ್ಯತೆಗಳು ಕಡಿಮೆ ಇರುತ್ತವೆ ಎಂದು ಇತ್ತೀಚಿನ ಅಧ್ಯಯನಗಳು ಹೇಳಿವೆ.

* **ಆಗಾಗ ಆರೋಗ್ಯ ತಪಾಸಣೆ:** ಆಗಾಗ ಆರೋಗ್ಯ ತಪಾಸಣೆಗೆ ಒಳಗಾಗಬೇಕು. ನಿಮ್ಮ ರಕ್ತದೊತ್ತಡ, ಕೊಲೆಸ್ಟರಾಲ್ ಹಾಗೂ ಟಿಜಿ ಮಟ್ಟಗಳನ್ನು ಸಾಮಾನ್ಯ ಪ್ರಮಾಣದಲ್ಲಿ ನಿಯಂತ್ರಣದಲ್ಲಿಡಬೇಕು. ಇದು ನಿಮ್ಮ ಆರೋಗ್ಯಕರ ಹೃದಯಕ್ಕೆ ಮುಖ್ಯ.

* **ವ್ಯಾಯಾಮ:** ನಿಯಮಿತ ವ್ಯಾಯಾಮಗಳನ್ನು ಮಾಡುವುದರಿಂದ ಹೃದಯ ಮಾಂಸಖಂಡಗಳು ಬಲಗೊಂಡು ಹೃದಯಾಘಾತಗಳನ್ನು ಕಡಿಮೆ ಮಾಡುತ್ತದೆ. ಕಾಲ್ನಡಿಗೆ, ಬಿರು ನಡಿಗೆ ಮತ್ತು ಸರಳ ದೇಹ ದಂಡನೆಗಳು ನಿಮಗೆ ಅದ್ಭುತ ಪ್ರಯೋಜನಗಳನ್ನು ನೀಡಬಲ್ಲವು.

* **ಧೂಮಪಾನ ಮತ್ತು ಮದ್ಯಪಾನ ತ್ಯಜಿಸಿ:** ಧೂಮಪಾನವು ಜೀವಿತಾವಧಿಯನ್ನು 15–25 ವರ್ಷಗಳಷ್ಟು ಕಡಿಮೆ ಮಾಡುತ್ತದೆ ಹಾಗೂ ಆಲ್ಕೋಹಾಲ್ ಸೇವನೆಯ ಹೃದಯದ ಮಾಂಸಖಂಡಗಳಿಗೆ ಹಾನಿಯುಂಟು ಮಾಡಿ ರಕ್ತದೊತ್ತಡವನ್ನು ಹೆಚ್ಚಿಸುತ್ತದೆ.

* **ನಗು ಚಿಕಿತ್ಸೆ:** ನಗು ಚಿಕಿತ್ಸೆ ನಿಮ್ಮ ಹೃದಯಕ್ಕೆ ಅತ್ಯುತ್ತಮವಾದ ಔಷಧ. ಪ್ರತಿದಿನ ಕೇವಲ 15 ನಿಮಿಷಗಳ ಕಾಲ ನಗುವುದರಿಂದ ನಿಮ್ಮರಕ್ತ ಸಂಚಾರ ಶೇ. 22ರಷ್ಟು ಹೆಚ್ಚಾಗುತ್ತದೆ ಹಾಗೂ ರಕ್ತನಾಳಗಳು ದಪ್ಪವಾಗುವುದನ್ನು ತಡೆಗಟ್ಟುತ್ತದೆ.

* **ಕಾರ್ಯ ವೇಳಾಪಟ್ಟಿ ನಿರ್ವಹಣೆ:** ಸೂಕ್ತ ರೀತಿಯಲ್ಲಿ ಯೋಜನೆ ರೂಪಿಸಿದ ಹಾಗೂ ಸಂಘಟಿತ ವೇಳಾಪಟ್ಟಿಗಳು ನಿಮ್ಮ ಒತ್ತಡದ ಮಟ್ಟಗಳನ್ನು ಇಳಿಸಲು ಸಹಕಾರಿ ಹಾಗೂ ನಿಮ್ಮ ಜೀವನ ಮಟ್ಟವನ್ನು ಸುಧಾರಿಸುತ್ತದೆ.

* **ಔಷಧಗಳು :** ಸಕಾಲಿಕ ಮತ್ತು ನಿಯಮಿತ ಔಷಧಿಗಳಿಂದ ಹೃದ್ರೋಗಗಳನ್ನು ತಡೆಗಟ್ಟಬಹುದು.







# ಸನ್ಮಾನ್ಯ ರಾಷ್ಟ್ರಪತಿಗಳಿಂದ ರಾಣಿ ಚೆನ್ನಭೈರಾದೇವಿ ಸ್ಮಾರಕ ಅಂಚೆ ಚೀಟಿ ಬಿಡುಗಡೆ

**ವಿ**ಜಯನಗರದ ಸಾಳುವ ವಂಶದ ಒಂದು ಶಾಖೆಯ ಅರಸರು ಗೇರುಸೊಪ್ಪೆಯನ್ನು ಆಳುತ್ತಿದ್ದರೆ ಮತ್ತೊಂದು ವಂಶದವರು ಹಾಡುವಳ್ಳಿಯನ್ನು ಆಳುತ್ತಿದ್ದರು. ಗೇರುಸೊಪ್ಪೆಯ ಅರಸ ಇಮ್ಮಡಿ ದೇವರಾಯ (1515–50) ಪೋರ್ಚುಗೀಸರ ಮೇಲೆ ಯುದ್ಧ ಮಾಡಿದ. ಮಡಗೋವೆಯ ಬಳಿ 1542ರಲ್ಲಿ ನಡೆದ ಭೀಕರ ಯುದ್ಧದಲ್ಲಿ ಆತ ಸೋಲನ್ನಪ್ಪಿದ ಬಳಿಕ ಪೋರ್ಚುಗೀಸರು ಆತನ ರಾಜಧಾನಿ ಭಟ್ಕಳವನ್ನು ಸುಟ್ಟು ಹಾಕಿದರು. ಆತನ ಪತ್ನಿ ಚೆನ್ನಾದೇವಿಯ ತಂಗಿಯೇ ಚೆನ್ನಭೈರಾದೇವಿ. ಪೋರ್ಚುಗೀಸರ ಜೊತೆಗಿನ ಒಪ್ಪಂದದಂತೆ ಕಪ್ಪವನ್ನು ಕೊಡಲಿಲ್ಲವೆಂದು, ಕಾರ್ಟಜ್ ಪಡೆಯದ ಮಹಮದ್ದೀಯರ ಹಡಗುಗಳಿಗೆ ಭಟ್ಕಳ ಬಂದರಿನಲ್ಲಿ ಆಶ್ರಯ ಕೊಟ್ಟಿರುವಳೆಂದು ಆರೋಪಿಸಿ, ಪೋರ್ಚುಗೀಸ್ ಕಪ್ತಾನ ಆಲ್ಫನ್ಸೋ ಡಿಸೋಜಾ ಭಟ್ಕಳವನ್ನು ಮುತ್ತಿ ರಾಣಿಯನ್ನು ಸೋಲಿಸಿ ಭಟ್ಕಳವನ್ನು ಸುಟ್ಟು ಹಾಕಿದ. ಅಕ್ಕನ ನಂತರ ತಂಗಿ



ರಾಣಿ ಎಂದೂ ಕರೆಯಲಾಗಿದೆ. ಪೋರ್ಚುಗೀಸರು, ಕೆಳದಿ ಅರಸರು ಮತ್ತು ಬಿಜಾಪುರದ ಸುಲ್ತಾನರ ನಡುವಿನ ಯುದ್ಧಗಳನ್ನು ತನ್ನ ಜಾಣ್ಮೆಯಿಂದ ನಿರ್ವಹಿಸಿದ ಈಕೆ 1552–1606 ರ ನಡುವಿನ ಐವತ್ನಾಲ್ಕು ವರ್ಷಗಳ ಕಾಲ ರಾಜ್ಯಭಾರ ನಡೆಸಿದಳು. ಗೇರುಸೊಪ್ಪೆಯಲ್ಲಿ ಅಲ್ಲಿನ ನಾಡವರು ಮತ್ತು ಖಾರ್ವಿಗಳು "ಅವ್ವರಸಿ" ಎಂದು ಪೂಜಿಸುವ ರಾಣಿ ಚೆನ್ನಭೈರಾದೇವಿಯ ದೇವಸ್ಥಾನವಿದೆ. ಈಕೆಗೆ ಪೋರ್ಚುಗೀಸರು "ರೈನಾ ದೆ ಪಿಮೆಂಟಾ" ಎಂಬ ಹೆಸರು ಕೊಟ್ಟಿದ್ದರು.

1552 ರಿಂದ 1606 ರವರೆಗೆ ಒಟ್ಟು 54 ವರ್ಷಗಳ ಕಾಲ ಹೈವ, ತುಳುವ, ಕೊಂಕಣ ಪ್ರದೇಶಗಳನ್ನು ಹಾಡುವಳ್ಳಿ ಗೇರುಸೊಪ್ಪೆ ಅವಳಿ ಪಟ್ಟಣಗಳನ್ನು ಕೇಂದ್ರವಾಗಿ ಇಟ್ಟುಕೊಂಡು ಆಳಿದ ವೀರ ರಾಣಿ ಚೆನ್ನಭೈರಾದೇವಿ ಸರ್ವಧರ್ಮ ಸಮನ್ವಯ ಸಾಧಿಸಿದ ಜನಮಾನಿನಿ. ಎಲ್ಲ ಸಮಾಜದ ಎಲ್ಲ ಪ್ರಜೆಗಳಿಗೂ ಕೃಷಿ, ವ್ಯಾಪಾರ ಮತ್ತು

ಅಮೆರಿಕೆಯ ಟೆಕ್ಸಾಸ್ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಚಾರ್ಯೆ ಡಾ. ಹನ್ನಾ ಚಾಪೆಲ್ ವೋಜೋಸ್ಕಿ ತನ್ನ ಪ್ರಬಂಧವೊಂದರಲ್ಲಿ ಹೀಗೆ ಬರೆದಿದ್ದಾರೆ.

"Her story—what little we know of it today—is important for a variety of reasons, not least because it counters the masculinist narratives of conquest and dominance penned by European chroniclers from the beginning of the colonial period. Chennabhairadevi was almost an exact contemporary of Queen Elizabeth I of England, and in many ways she was her counterpart. Chennabhairadevi succeeded in holding onto her kingdom for over 50 years, outwitting multiple adversaries through shrewd alliances, and in leveraging a great deal of political, cultural, and economic power.

"ರಾಣಿ ಚೆನ್ನಭೈರಾದೇವಿಯ ಧೈರ್ಯ, ಸ್ಥೈರ್ಯ ಮತ್ತು ಸಾಧನೆಯನ್ನು ನಾವು ಸುವರ್ಣಾಕ್ಷರಗಳಲ್ಲಿ ಮಾತ್ರವಲ್ಲ, ವಜ್ರದ ಅಕ್ಷರಗಳಲ್ಲಿ ಕೆತ್ತಬೇಕು"

ಇದು, ಗೌರವಾನ್ವಿತ ರಾಷ್ಟ್ರಪತಿ ಸನ್ಮಾನ್ಯ ಡಾ. ದ್ರೌಪದಿ ಮುರ್ಮುರವರು ದಿನಾಂಕ 24–7–2025ರಂದು ರಾಷ್ಟ್ರಪತಿ ಭವನದಲ್ಲಿ ರಾಣಿಯ ನೆನಪಿನ ಅಂಚೆಚೀಟಿ ಬಿಡುಗಡೆಯ ಸಂದರ್ಭದಲ್ಲಿ ನುಡಿದ ಮಾತು.




ಚೆನ್ನಭೈರಾದೇವಿಗೆ ಹಾಡುವಳ್ಳಿಯ ಜೊತೆಗೆ ಗೇರುಸೊಪ್ಪೆಯ ಅಧಿಕಾರವೂ ದೊರಕಿತು. 1559 ಮತ್ತು 1570ರಲ್ಲಿ ಪೋರ್ಚುಗೀಸರ ವಿರುದ್ಧ ನಡೆದ ಹೋರಾಟ ನಡೆಸಿ ಎರಡೂ ಯುದ್ಧಗಳನ್ನು ಗೆದ್ದಳು. 1671ರ ಸಂಯುಕ್ತ ಸೇನೆಯ ನಾಯಕತ್ವವೂ ಸಹ ಇವಳೇ ವಹಿಸಿದ್ದಳು. ಇದರಲ್ಲಿ ಗುಜರಾತಿನ ಸುಲ್ತಾನರು, ಬೀದರ್‌ನ ಸುಲ್ತಾನರು, ಬಿಜಾಪುರದ ಆದಿಲ್ ಶಾಹಿಗಳು ಹಾಗು ಕೇರಳದ ಜಾಮೋರಿನ್ ದೊರೆಗಳನ್ನು ಒಳಗೊಂಡಂತೆ ಹಲವು ಜನ ರಾಜರು ಈ ಸೇನೆಯಲ್ಲಿದ್ದರು.

ಚೆನ್ನಭೈರಾದೇವಿಯು ಸಾಳುವ ವಂಶಕ್ಕೆ ಸೇರಿದ ಒಬ್ಬ ರಾಣಿ. 16ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ ಈ ರಾಣಿಯು 54 ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದಳು. ಪ್ರಸ್ತುತ ಭಟ್ಕಳ ತಾಲೂಕಿನಲ್ಲಿರುವ ಹಾಡವಳ್ಳಿ (ಸಂಗೀತಪುರ) ಮತ್ತು ಗೇರುಸೊಪ್ಪ ಪ್ರಾಂತ್ಯವನ್ನು ಆಳುತ್ತಿದ್ದ ಈಕೆಯನ್ನು ಗೇರುಸೊಪ್ಪೆಯ ರಾಣಿ ಎಂದು ವರ್ಣಿಸಲಾಗಿದೆ. ಕರಾವಳಿ ಮತ್ತು ಮಲೆನಾಡಿನ ಪ್ರದೇಶದಲ್ಲಿ ವ್ಯಾಪಕವಾಗಿ ಬೆಳೆಯುತ್ತಿದ್ದ ಕಾಳುಮೆಣಸನ್ನು ಯೂರೋಪಿಗೆ ರಫ್ತು ಮಾಡುತ್ತಿದ್ದ ಈಕೆಗೆ ಕರಿಮೆಣಸಿನ/ಕಾಳುಮೆಣಸಿನ ವ್ಯವಹಾರವನ್ನು ಕಲಿಸಿ ತನ್ನ ಸಾಮ್ರಾಜ್ಯದ ಆದಾಯವನ್ನು ಹೆಚ್ಚಿಸಿದ್ದಳು. 1606ರಲ್ಲಿ ಕೆಳದಿ ಅರಸರ ತಂತ್ರಗಾರಿಕೆಯಿಂದ ಬಂಧನಕ್ಕೆ ಒಳಗಾಗಿ ಸಾಮ್ರಾಜ್ಯವನ್ನು ಕಳೆದುಕೊಂಡು ಹಳೆ ಇಕ್ಕೇರಿಯಲ್ಲಿ ಬಂಧನದಲ್ಲಿದ್ದು, ಜಿನಪದ್ಧತಿಗೆ ಅನುಗುಣವಾಗಿ ನಿರಾಹಾರ ವ್ರತಧಾರಿಯಾಗಿ ಸಲ್ಲೇಖದ ಮೂಲಕ ಇಹಲೋಕ ತ್ಯಜಿಸಿದ್ದಳು.

# ಭಾರತ ಸರ್ಕಾರದ ಸಾರ್ವಜನಿಕ ವಲಯದ 12 ಬ್ಯಾಂಕ್‌ಗಳು ಮತ್ತು ಎಲ್‌ಐಸಿ ಲಾಭದ ಗಳಿಕೆಯತ್ತ

**ಪ್ರ**ಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ರೂ. 19,987/– ಕೋಟಿ ನಿವ್ವಳ ಲಾಭ ಗಳಿಸಿದೆ. ಕಳೆದ ಜೂನ್ ತ್ರೈಮಾಸಿಕದಲ್ಲಿ ಒಟ್ಟು ವರಮಾನವು ರೂ. 2.10 ಲಕ್ಷ ಕೋಟಿಯಷ್ಟಿತ್ತು. ಈ ಬಾರಿ ರೂ. 2.22 ಲಕ್ಷ ಕೋಟಿಗೆ ಹೆಚ್ಚಳವಾಗಿದೆ.

ಮೊದಲ ವರ್ಷದ ಕಂತಿನ ಮೂಲಕ ರೂ. 7,525/– ಕೋಟಿ ಸಂಗ್ರಹವಾಗಿದೆ ಎಂದು ಪಿಟಿಐ ವಾರ್ತೆ ಬಿಡುಗಡೆ ಮಾಡಿದೆ. ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಭಾರತೀಯ ಸ್ಟೇಟ್




ಬ್ಯಾಂಕ್ (ಎಸ್‌ಬಿಐ) ರೂ. 19,160/– ಕೋಟಿ ನಿವ್ವಳ ಲಾಭ ಗಳಿಸಿದೆ. ಕಳೆದ ಜೂನ್ ತ್ರೈಮಾಸಿಕದಲ್ಲಿ ಒಟ್ಟು ರೂ. 1,22,688/– ಕೋಟಿ ವರಮಾನ ಗಳಿಸಿತ್ತು. ಈ ಬಾರಿ ರೂ. 1,35,342/– ಕೋಟಿ ಗಳಿಸಿದೆ. ಬಡ್ಡಿ ಮೂಲಕ ರೂ. 1,17,996/– ಕೋಟಿ ಗಳಿಸಲಾಗಿದೆ. ಕಾರ್ಯಾಚರಣೆ ಲಾಭ ರೂ. 30,544/– ಕೋಟಿಯಾಗಿದೆ ಎಂದು ತಿಳಿಸಿದೆ.

ಇದೇ ರೀತಿ ಭಾರತ ಸರ್ಕಾರದ ಸಾರ್ವಜನಿಕ ವಲಯದ 12 ಬ್ಯಾಂಕ್‌ಗಳು ಸಹ 2025–26ನೇ ಸಾಲಿನ ಪ್ರಥಮ ತ್ರೈಮಾಸಿಕದ ಜೂನ್ ಅಂತ್ಯಕ್ಕೆ ರೂ. 44,218/– ಕೋಟಿ ಲಾಭ ಗಳಿಸಿದೆ.

# ಉಪನಗರಗಳ ವರ್ತುಲ ರಸ್ತೆ: ಸರ್ಕಾರದ ಮೀನಾಮೇಷ ವಿಳಂಬ

**ಉ**ದ್ಯಾನನಗರಿ, ಮಾಹಿತಿ ತಂತ್ರಜ್ಞಾನ ನಗರ, ಸಿಲಿಕಾನ್ ಸಿಟಿ ಎಂಬಿತ್ಯಾದಿ ಕೀರ್ತಿಗೆ ಪಾತ್ರವಾಗಿರುವ ನಮ್ಮ ಬೆಂಗಳೂರು ವಿಶ್ವದ ಭೂಪಟದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ನಿರೀಕ್ಷೆಗೂ ಮೀರಿದ ಬೆಳವಣಿಗೆಯಿಂದಾಗಿ ಇಡೀ ಜಗತ್ತು ಬೆಂಗಳೂರನ್ನು ಬೆರಗುಗಣ್ಣುಗಳಿಂದ ನೋಡುವಂತೆ ಮಾಡಿದೆ. ಇಲ್ಲಿ ಮೂಲಸೌಕರ್ಯಗಳು ದೇಶ–ವಿದೇಶಗಳ ಉದ್ಯಮಿಗಳನ್ನು ವಿಶೇಷವಾಗಿ ಆಕರ್ಷಿಸುತ್ತಿವೆ. ವಿಸ್ಮಯನಗರಿ ಬೆಂಗಳೂರಿನ ವೇಗದ ಬೆಳವಣಿಗೆಯು ನಗರದ ಪ್ರಮುಖ ಮೂಲಸೌಕರ್ಯದ ಸಾಮರ್ಥ್ಯವನ್ನು ಮೀರಿ ಬೆಳೆದಿದ್ದು, ರಿಯಲ್ ಎಸ್ಟೇಟ್ ಉದ್ಯಮದ ಅಭಿವೃದ್ಧಿಯು ನಗರದ ಹೊರವಲಯವನ್ನೂ ವಿಸ್ತರಿಸಿ ವ್ಯಾಪಿಸಿದೆ. ಸ್ಯಾಟಲೈಟ್ ಟೌನ್ ರಿಂಗ್‌ರಸ್ತೆ (ಎಸ್‌ಟಿಆರ್‌ಆರ್) ಈಗ ರಿಯಲ್ ಎಸ್ಟೇಟ್ ಉದ್ಯಮಕ್ಕೆ ವರದಾನವಾಗಿದೆ. ಬೆಂಗಳೂರು ಮಹಾನಗರದ ಸುತ್ತಲೂ ಇರುವ 12 ಸ್ಯಾಟಲೈಟ್ ಟೌನ್‌ಗಳನ್ನೂ (ಉಪನಗರಗಳು) ಸಂಪರ್ಕಿಸುವ 288–ಕಿಲೋಮೀಟರ್ ಎಕ್ಸ್‌ಪ್ರೆಸ್‌ವೇ ರಿಯಲ್ ಎಸ್ಟೇಟ್ ಉದ್ಯಮ ಸೇರಿದಂತೆ ಪ್ರತಿಯೊಂದೂ ಬೆಳವಣಿಗೆಗೆ ವೇಗವರ್ಧನೆ ನೀಡಲು ನಿರ್ಣಾಯಕ ಪಾತ್ರ ವಹಿಸುವಲ್ಲಿ ಗಮನ ಸೆಳೆದಿದೆ. ಎಸ್‌ಟಿಆರ್‌ಆರ್ ಕೇವಲ ನಗರದ ಸುತ್ತ ಸಂಚಾರವನ್ನು ಸುಗಮಗೊಳಿಸುವುದಲ್ಲದೆ, ಜನರ ಜೀವನಮಟ್ಟ ಸುಧಾರಣೆ, ವಿವಿಧ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯನಿರ್ವಹಣೆಗೆ ಹೊಸ ಹೊಸ ಅವಕಾಶಗಳನ್ನು ಸೃಷ್ಟಿಯನ್ನು ಪುನರ್ ವ್ಯಾಖ್ಯಾನಿಸುತ್ತದೆ. ಈ ವಿಶಾಲ ಪ್ರದೇಶದಲ್ಲಿ ಯೋಜಿತ, ವಿಕೇಂದ್ರೀಕೃತ ನಗರ ಬೆಳವಣಿಗೆಯ ಮುಂದಿನ ಪ್ರಗತಿ ಹಂತಕ್ಕೆ ಸದೃಢ ವೇದಿಕೆಯನ್ನು ಸಿದ್ಧಪಡಿಸುತ್ತದೆ.




ಬೆಂಗಳೂರು ಸ್ಯಾಟಲೈಟ್ ಟೌನ್ ರಿಂಗ್‌ರಸ್ತೆ (ಎಸ್‌ಟಿಆರ್‌ಆರ್) 288 ಕಿ.ಮೀ.ಗಳ ಪ್ರವೇಶ–ನಿಯಂತ್ರಿತ ಎಕ್ಸ್‌ಪ್ರೆಸ್‌ವೇ ಆಗಿದೆ, ಇದರಲ್ಲಿ 243 ಕಿ.ಮೀ. ಕರ್ನಾಟಕದಲ್ಲಿ ಮತ್ತು 45 ಕಿ.ಮೀ. ತಮಿಳುನಾಡಿನಲ್ಲಿ ಭಾರತ ಮಾಲಾ ಪರಿಯೋಜನಾ ಯೋಜನೆಯಡಿ ಇದೆ. ಎಸ್‌ಟಿಆರ್‌ಆರ್ 12 ಉಪನಗರಗಳನ್ನು ಅಂದರೆ ಹೊಸಕೋಟೆ, ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ, ಕನಕಪುರ, ರಾಮನಗರ, ಅತ್ತಿಬೆಲೆ, ಆನೇಕಲ್, ಮಾಗಡಿ, ಸರ್ಜಾಪುರ, ಬಿಡದಿ ಮತ್ತು ದಾಬಸ್‌ಪೇಟೆ ಪಟ್ಟಣದ ಸುತ್ತುವರಿದು ಬೆಂಗಳೂರಿನ ಭೌಗೋಳಿಕ ಪ್ರದೇಶವನ್ನು ವೃತ್ತಾಕಾರದ ಕಾರಿಡಾರ್‌ಗೆ ಸಂಪರ್ಕಿಸುವ ಮಹತ್ವದ ಯೋಜನೆಯಾಗಿದೆ. ಎಸ್‌ಟಿಆರ್‌ಆರರ್ 6 ರಾಷ್ಟ್ರೀಯ ಹೆದ್ದಾರಿಗಳು ಮತ್ತು 8 ರಾಜ್ಯ ಹೆದ್ದಾರಿಗಳನ್ನು ಸಂಪರ್ಕಿಸುತ್ತದೆ, ಪ್ರಾದೇಶಿಕ ಸಂಪರ್ಕವನ್ನು ಸುಧಾರಿಸಲು, ಸಂಚಾರ ದಟ್ಟಣೆಯನ್ನು ನಿವಾರಿಸಲು ಮತ್ತು ಅಗತ್ಯ ಸಮಯದೊಳಗೆ ನಗರ ಅಭಿವೃದ್ಧಿಯನ್ನು ಸುಗಮಗೊಳಿಸಲು ಸಹಾಯ ಮಾಡುತ್ತದೆ. 2027ರೊಳಗೆ ಈ ಮಹತ್ವಕಾಂಕ್ಷಿ ಯೋಜನೆ ಸಂಪೂರ್ಣವಾಗಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಸುಧಾರಿತ ಅಂತರ್–ಸಂಪರ್ಕ/ಸುರಕ್ಷಿತ ಪ್ರಯಾಣದ ಸೌಲಭ್ಯಗಳು ಎಸ್‌ಟಿಆರ್‌ಆರ್‌ನ 12 ಉಪನಗರಗಳ ನಡುವೆ ಸದೃಢ ಸಂಪರ್ಕವನ್ನು ಬಲಪಡಿಸುತ್ತದೆ. ಹೀಗಾಗಿ ಹೊರ ವರ್ತುಲ ರಸ್ತೆ (ಔಟರ್ ರಿಂಗ್‌ರೋಡ್–ಓಆರ್‌ಆರ್)ಮತ್ತು ರಾಷ್ಟ್ರೀಯ ಹೆದ್ದಾರಿಗಳ (ನ್ಯಾಷನಲ್ ಹೈವೇ–ಎನ್‌ಎಚ್) ಮೇಲಿನ ಭಾರೀ ಒತ್ತಡವನ್ನು ಕಡಿಮೆ ಮಾಡುತ್ತದೆ. ವೇಗದ ಪ್ರಯಾಣ ಮತ್ತು ಕಡಿಮೆ ಸಂಚಾರ ದಟ್ಟಣೆಯು ಜೀವನ ಸುಧಾರಣೆ ಮಟ್ಟವನ್ನು ಹೆಚ್ಚಿಸುತ್ತದೆ ಮತ್ತು ದೈನಂದಿನ ಚಟುವಟಿಕೆಗಳಿಗಾಗಿ ಉತ್ತಮ ಪ್ರಯಾಣಕ್ಕೆ ಕೊಡುಗೆ ನೀಡುತ್ತದೆ. ಒಟ್ಟಾರೆ ಇವೆಲ್ಲವೂ ವಿವಿಧ ಕ್ಷೇತ್ರಗಳಲ್ಲಿ ನಿರೀಕ್ಷಿತ ಬೆಳವಣಿಗೆ ಸಾಧಿಸಲು ನೆರವಾಗುತ್ತವೆ.

ದೇವನಹಳ್ಳಿ, ಹೊಸಕೋಟೆ ಮತ್ತು ದೊಡ್ಡಬಳ್ಳಾಪುರ ಮೂಲಸೌಕರ್ಯ ಮತು ಕೈಗಾರಿಕಾ ಬೆಳವಣಿಗೆಯ ಆಧಾರದ ಮೇಲೆ ಅತಿ ಹೆಚ್ಚು ಆರ್‌ಒಐ (ರಿಟರ್ನ್ ಆನ್ ಇನ್‌ವೆಸ್ಟ್‌ಮೆಂಟ್–ಬಂಡವಾಳ ಹೂಡಿಕೆಗೆ ಲಾಭ) ಹೊಂದಿರುವ ವಿಫುಲ ಅವಕಾಶಗಳ ಹೂಡಿಕೆ ಕೇಂದ್ರ ಪ್ರದೇಶಗಳಾಗುತ್ತವೆ, ಆದರೆ ಮಾಗಡಿ, ಅತ್ತಿಬೆಲೆ ಮತ್ತು ಕನಕಪುರ ಕಡಿಮೆ ಪ್ರವೇಶ ಮಟ್ಟದ ಹೂಡಿಕೆಯೊಂದಿಗೆ ದೀರ್ಘಕಾಲೀನ ಸಾಮರ್ಥ್ಯವನ್ನು ಹೊಂದಿವೆ. ಹೂಡಿಕೆದಾರರು ಸೂಕ್ತ ಕೈಗಾರಿಕೆಗಳು, ನಿವೇಶನಗಳು, ಗೋದಾಮು, ಭೂಮಿ ಅಥವಾ ಸಮಗ್ರ ಗೇಟೆಡ್ ಸಮುದಾಯಗಳನ್ನು ಹುಡುಕುತ್ತಿದ್ದಾರೆ. ಎಸ್‌ಟಿಆರ್‌ಆರ್ ವಿಕೇಂದ್ರೀಕೃತ ನಗರೀಕರಣವನ್ನು ಉತ್ತೇಜಿಸುತ್ತಿದೆ ಮತ್ತು ಈ ಉಪನಗರ ಪಟ್ಟಣಗಳನ್ನು 2027 ರ ವೇಳೆಗೆ ಸ್ವಾವಲಂಬಿ ನಗರ ಕೇಂದ್ರಗಳಾಗಿ ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಸ್ಯಾಟಲೈಟ್ ಟೌನ್‌ರಿಂಗ್‌ರಸ್ತೆ (ಎಸ್‌ಟಿಆರ್‌ಆರ್) ಕೇವಲ ಸಾರಿಗೆ ಕಾರಿಡಾರ್‌ಗಿಂತ ಹೆಚ್ಚಾಗಿ, ಬೆಂಗಳೂರಿನ ನಗರ ಅಭಿವೃದ್ಧಿಯ ವಿಕೇಂದ್ರೀಕರಣಕ್ಕಾಗಿ ಒಂದು ಮಾಸ್ಟರ್ ಪ್ಲಾನ್ ಆಗಿದೆ. 12 ಉಪನಗರಗಳು ನಗರ ಹೊರವಲಯದಿಂದ ಉನ್ನತ–ಸಾಮರ್ಥ್ಯದ ಆಸ್ತಿ ಮಾರುಕಟ್ಟೆಗಳಾಗಿ ಹೊರಹೊಮ್ಮುವುದರೊಂದಿಗೆ, ಇದು ಗ್ರೇಟರ್ ಬೆಂಗಳೂರಿನ ಭವಿಷ್ಯವನ್ನು ರೂಪಿಸುತ್ತಿದೆ. ಭಾರತ್‌ಮಾಲಾ ಪರಿಯೋಜನೆ ಲಾಟ್–3ರ ಅಡಿಯಲ್ಲಿ ಬರುವ ಈ ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್‌ವೇ ಬೆಂಗಳೂರು ನಗರದ ಸುತ್ತಲೂ ಬೈಪಾಸ್ ಆಗಿ ಕಾರ್ಯನಿರ್ವಹಿಸುತ್ತದೆ. ಇದನ್ನು 3 ಸಮಾನಾಂತರ ಹಂತಗಳಲ್ಲಿ ನಿರ್ಮಿಸಲಾಗುತ್ತಿದ್ದು, ಓಊ–9480 ನಿರ್ಮಾಣ ಮತ್ತು ಅಸ್ತಿತ್ವದಲ್ಲಿರುವ ಓಊ–648 (ಹಳೆಯ ಓಊ–207)ನ ಮರುಜೋಡಣೆಯನ್ನು ಒಳಗೊಂಡಿರುತ್ತದೆ. ಖಖಿಖಖ ಯೋಜನೆಯು ಡಿಸೆಂಬರ್ 2025 ರವರೆಗೆ ಪೂರ್ಣಗೊಳಿಸಲು ಗುರಿಯೊಂದಿಗೆ ಕೇಂದ್ರ ಸರ್ಕಾರವು ರಾಜ್ಯಸರ್ಕಾರಗಳ ಸಹಯೋಗದೊಂದಿಗೆ ಯೋಜನೆ ಪ್ರಾರಂಭಿಸಲಾಗಿ ರಸ್ತೆಯ ನಿರ್ಮಾಣ ಕಾಮಗಾರಿಯು ಕಾರ್ಯಗೊಳಿಸಲಾಗುತ್ತಿದ್ದು ವಿವರವಾದ ಯೋಜನಾ ವರದಿ (ಆಕಖ) ಅನ್ನು ಲೂಯಿಸ್ ಬರ್ಗರ್ ಗ್ರೂಪ್ ಇಂಕ್ ಮತ್ತು ಏಖಖಿಏಔ (ಹೊಸೂರು–ಸರ್ಜಾಪುರ ವಿಭಾಗ ಮಾತ್ರ) ಸಿದ್ಧಪಡಿಸಿವೆ. ಯೋಜನೆಗಾಗಿ ಭೂಸ್ವಾಧೀನವು 2018ರಲ್ಲಿ ಪ್ರಾರಂಭವಾಯಿತು. ಕರ್ನಾಟಕದಲ್ಲಿ ಒಟ್ಟು 1009.8 ಹೆಕ್ಟೇರ್ ಮತ್ತು ತಮಿಳುನಾಡಿನಲ್ಲಿ 340 ಹೆಕ್ಟೇರ್ ಅಗತ್ಯವಿದೆ. ಈ ಎಕ್ಸ್‌ಪ್ರೆಸ್‌ವೇ ಓಊಂಖ ನಿಂದ ಪ್ರಸ್ತಾವಿತ 330 ಕಿಮೀ ಬೆಂಗಳೂರು–ಮಂಗಳೂರು ಎಕ್ಸ್‌ಪ್ರೆಸ್‌ವೇಯ ಪೂರ್ವ ಅಂತ್ಯವಾಗಿ ಕಾರ್ಯನಿರ್ವಹಿಸುತ್ತದೆ. ಇದರ ಜೋಡಣೆಯು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ (ಃಓಕ) ಪರಿಸರ ಸೂಕ್ಷ್ಮವಲಯ (ಇಖಚ) ಮೂಲಕ ಕಿಮೀ 95.525 ರಿಂದ ಕಿಮೀ 138.0000 ವರೆಗೆ ಹಾದುಹೋಗುತ್ತದೆ ಮತ್ತು 28.50 ಮೀ ಸಾಲು ಹೊಂದಿರುವ ಅದರ ಮಧ್ಯಭಾಗದ ಮೂಲಕ 8.1 ಕಿಮೀ ಎತ್ತರದ ಹೆದ್ದಾರಿ ರಸ್ತೆಯನ್ನು ಒಳಗೊಂಡಿದೆ. ಇದು ಪೂರ್ಣಗೊಂಡ ನಂತರ ಎಷ್ಟರ ಮಟ್ಟಿಗೆ ಜನರ ಜೀವನ ಮಟ್ಟ ಸುಧಾರಣೆಯಾಗುತ್ತದೆ ಮತ್ತು ಬೆಂಗಳೂರು ಸುತ್ತಮುತ್ತ ಗ್ರಾಮಾಂತರ ಜನರಿಗೆ ಉಪಯೋಗವಾಗಿ ವಾಹನ ದಟ್ಟಣೆ ನಿವಾರಣೆಯಾಗಿ ಅನುಕೂಲವಾಗುತ್ತವೆಂಬುದು ಕಾದು ನೋಡಬೇಕಿದೆ.

# ನಮ್ಮ ಸಂಸ್ಕೃತಿ, ಪರಂಪರೆಯ ಹೆಮ್ಮೆ ಕರ್ನಾಟಕ ಶಾಸ್ತ್ರೀಯ ಸಂಗೀತ




**ಹಿಂದಿನ ಸಂಚಿಕೆಯಿಂದ**

**ಈ** ಪ್ರಕಾರದಲ್ಲಿ ಇಂದಿಗೂ ಬಳಕೆಯಲ್ಲಿರುವ ಅಣ್ಣಮಾಚಾರ್ಯರ ರಚನೆಗಳು, ನಾರಾಯಣ ತೀರ್ಥರ ತರಂಗಗಳು, ಭದ್ರಾಚಲ ರಾಮದಾಸರ ಹಾಡುಗಳು, ದಾಸಪರಂಪರೆಯಲ್ಲಿ ಕನಕದಾಸರಾದಿಯಾಗಿ ಎಷ್ಟೋ ರಚನೆಗಳು ಕೇವಲ ಕರ್ಣಪರಂಪರೆಯಲ್ಲಿಯೇ ಇದ್ದು, ಇಂತಹ ಇನ್ನೂ ಎಷ್ಟೋ ರಚನೆಗಳು ಲಭ್ಯವಿಲ್ಲದಾಗಿವೆ. ಆಗಿನ ರಾಜಾಶ್ರಯಗಳಲ್ಲಿದ್ದ ಸಂಗೀತಗಾರರ, ಬೇರೆ ಬೇರೆ ವಾಗ್ಗೇಯ ಕಾರರಲ್ಲಿ ಮೂಡಿರುವ ಕೃತಿಗಳೂ ಅಷ್ಟೇ. ವಿಪರ್ಯಾಸವೆಂದರೆ ಇಂತಹ ಕೃತಿಗಳನ್ನು ಇಂದಿನಂತೆ ಬರೆದು ಸಂರಕ್ಷಿಸಿಲ್ಲ. ಇದು ದೂಷಣೆಯಲ್ಲ, ಆಗತಾನೇ ಟಿಸಿಲೊಡೆದು ಮೂಡುತ್ತಿದ್ದ ಪ್ರಕಾರದ ಮಜಲುಗಳು ಜನಕ್ಕೆ ತಲುಪಲೇ ಒಂದೆರಡು ತಲೆಮಾರುಗಳು ಹಿಡಿದಿರಬಹುದು. ಸುಮಾರು 18ನೆಯ ಶತಮಾನದ ಹೊತ್ತಿಗೆ ಕೃತಿಗಳನ್ನು ಬರೆದಿಡುವ ಸಂಪ್ರದಾಯ ಹುಟ್ಟಿದ್ದು ಎನ್ನಬಹುದು.

ವಾಗ್ಗೇಯ ರಚನೆಗಳನ್ನು ಬರೆದಿಡುವ ಅಭ್ಯಾಸವು ಕರ್ನಾಟಕ ಸಂಗೀತ ಪರಂಪರೆ ಹೆಮ್ಮರವಾಗಿ ಬೆಳೆಯಲು ಅನುವು ಮಾಡಿಕೊಟ್ಟಿತು. ಲಕ್ಷ್ಯ–ಲಕ್ಷಣಗಳು, ಶಾಸ್ತ್ರಗ್ರಂಥಗಳನ್ನಾಧರಿಸಿ, ಆ ಅಂಶಗಳನ್ನೆಲ್ಲಾ ಒಳಗೊಂಡಂತೆ ಮಾಡಿದ ರಚನೆಗಳು ಜನಕ್ಕೆ ಹಾಡಲು ಆಸರೆಯಾದರೆ, ಅವುಗಳಲ್ಲಿ ಅಡಗಿದ್ದ ರಾಗಭಾವ ಹಾಗೂ ಶಾಸ್ತ್ರಾಧಾರಿತ ವಿಷಯಗಳು ಸಂಗೀತ ಶಾಸ್ತ್ರ ಜ್ಞಾನದ ಹಾಗೂ ಮನೋಧರ್ಮ ಸಂಗೀತದ ಬೆಳವಣಿಗೆಗೆ ಪುಷ್ಟಿ ನೀಡಿದವು. ಹಾಗಾಗಿ ಕಲ್ಪಿತ ಸಂಗೀತವು ಕಲ್ಪನಾಸಂಗೀತ ಚೆನ್ನಾಗಿ ಬೆಳೆಯಲು ಸಹಕಾರಿಯಾಗಿದ್ದರಲ್ಲಿ ಅನುಮಾನವಿಲ್ಲ. ಸಂಗೀತ ವಿದ್ಯಾರ್ಥಿಯ ಸ್ಪಷ್ಟ ಗಮನಕ್ಕೆ ಬಾರದಿದ್ದರೂ ಶಾಸ್ತ್ರ ಹಾಗೂ ಪ್ರಯೋಗ ಎರಡರ ಜ್ಞಾನವೂ ಅರಿವಿಗೆ ಬರುವಂತಹ, ಜೊತೆಗೆ ದೇವತಾಸ್ತುತಿಯೂ ಆಗುವಂತಹ ರಚನೆಗಳೇ ಈ ಕರ್ನಾಟಕ ಸಂಗೀತ ಪ್ರಕಾರದಲ್ಲಿ ಹೆಚ್ಚಾಗಿ ಕಾಣುವುದು. ಪುರಂದರದಾಸರು, ಕನಕದಾಸರು ಇವರೇ ಮೊದಲಾಗಿ ಮಾಡಿರುವ ರಚನೆಗಳಲ್ಲಿ ಸಾಹಿತ್ಯವು ದೇವತಾಸ್ತುತಿಯಷ್ಟೇ ಆಗಿರದೆ ಅವುಗಳಲ್ಲಿ ಸಮಾಜ ಸುಧಾರಣೆ, ಕ್ಷೇತ್ರದರ್ಶನ, ನೀತಿಪಾಠ, ಪುರಾಣಕಥನ, ಹೀಗೆ ಹತ್ತು ಹಲವಾರು ವಿಷಯಗಳ ಸುತ್ತ ಇರುವುದನ್ನು ಕಾಣುತ್ತೇವೆ. ವಾಗ್ಗೇಯತ್ವವು ವಾಕ್ (ಸಾಹಿತ್ಯ) ಮತ್ತು ಗೇಯ (ಸಂಗೀತ) ಎಂಬ ಎರಡು ಬೃಹತ್ ವಿಷಯಗಳ ಸಮ್ಮಿಲನದ ಅಸಾಮಾನ್ಯ ಕಲೆ. ಹಾಗಾಗಿ ವಾಗ್ಗೇಯಕಾರರುಗಳಿಗೆ ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ವಿಶೇಷ, ಪೂಜ್ಯ ಸ್ಥಾನಮಾನ.

ಹದಿನೈದು ಹದಿನಾರನೆಯ ಶತಮಾನದ ವಾಗ್ಗೇಯ ರಚನೆಗಳಲ್ಲಿ ಎಷ್ಟೋ ರಚನೆಗಳು ಕೈತಪ್ಪಿ ಹೋಗಿವೆ. ಅದಕ್ಕೂ ಹಿಂದಿನವು ಕೇವಲ ಶಾಸ್ತ್ರ ಅಥವಾ ಪದ್ಯರೂಪದಲ್ಲಿವೆ. ಲಭ್ಯವಿರುವಷ್ಟು ರಚನೆಗಳಲ್ಲಿ ವಾಕ್ ಮತ್ತು ಗೇಯಗಳಲ್ಲಿ ವಾಕ್ ಭಾಗವು ರಚನೆಕಾರರದ್ದೇ ಆಗಿದ್ದರೂ ಗೇಯ ಭಾಗವು ಆ ವಾಗ್ಗೇಯಕಾರರದ್ದು ಹೌದೇ ಅಲ್ಲವೇ ಎಂಬ ಸಂಶಯವಿದೆ. ಸಂಪ್ರದಾಯದಲ್ಲಿ ಬಂದ ಹತ್ತು ಹಲವು ಹಾಡುಗಳಲ್ಲಿ ರಚನೆಕಾರ ಗೇಯವಿದ್ದಿರಬಹುದು. ಆದರೆ, ಹೌದು ಎಂದು ಸ್ಥಾಪಿಸುವ ಯಾವ ಆಧಾರಗಳೂ ಇಲ್ಲ. ಹಾಗಾಗಿ ಇಂದು ದಾಸರ ರಚನೆಗಳಿಗೆ, ಅಣ್ಣಮಾಚಾರ್ಯರ ರಚನೆಗಳಿಗೆಲ್ಲ ಯಾರು ಬೇಕಾದರೂ ರಾಗ ಸಂಯೋಜನೆಗಳನ್ನು ಮಾಡಿ ಹಾಡುವ ರೂಢಿಯಿದೆ. ಅಂದರೆ ಗೇಯತ್ವ ಅಧಿಕಾರ ಗಾಯಕನ ಕೈಯಲ್ಲಿದೆ. ಸಾಂಪ್ರದಾಯಿಕ ಗೇಯಗಳನ್ನು ಕೇಳಿದಾಗಲೂ ನಮಗೆ ಆ ಕಾಲದ ಸಂಗೀತದ ಬಗ್ಗೆ ಒಂದು ಸ್ಥೂಲ ಚಿತ್ರಣ ಸಿಗಬಹುದಷ್ಟೇ ವಿನಾ ಅದರ ಸಂಪೂರ್ಣ ಚಿತ್ರಣ ತಿಳಿಯುವುದಿಲ್ಲ.

ಸುಲಾಡಿ ಅಥವಾ ಸೂಳಾದಿಗಳನ್ನು ಗಮನಿಸಿದಾಗ ತಾಳದ ಅಥವಾ ಲಯಜ್ಞಾನದ ಬಿಗಿಸಾಧನೆ ಇದ್ದಿರಬಹುದು ಎಂದು ಅರಿಯಬಹುದು.

(ಮುಂದಿನ ಸಂಚಿಕೆಗೆ)







# ಭಾರತ ಇಂಗ್ಲೆಡ್ ಸರಣಿ ರೋಚಕ ಅಂತ್ಯ

**ಜು**ಲೈ 10ರಿಂದ 14ರವರೆಗೆ ಐತಿಹಾಸಿಕ ಲಾರ್ಡ್ಸ್ ಮೈದಾನದಲ್ಲಿ ನಡೆದ ಭಾರತ ಹಾಗೂ ಇಂಗ್ಲೆಂಡ್ ನಡುವಿನ 3 ನೇ ಟೆಸ್ಟ್‌ನಲ್ಲಿ ಭಾರತ ಸೋಲು ಅನುಭವಿಸುವ ಮೂಲಕ ನಿರಾಸೆ ಮೂಡಿಸಿದೆ. ತೀವ್ರ ಜಿದ್ದಾಜಿದ್ದಿಗೆ ಸಾಕ್ಷಿಯಾಗಿದ್ದ ಈ ಪಂದ್ಯವನ್ನು ಗೆಲ್ಲಲು ಭಾರತಕ್ಕೆ ಇಂಗ್ಲೆಂಡ್ 192 ರನ್‌ಗಳ ಗುರಿಯನ್ನು ನೀಡಿತ್ತು. ಆದರೆ, ಪಂದ್ಯವನ್ನು ಕೈವಶ ಮಾಡಿಕೊಳ್ಳುವಲ್ಲಿ ಭಾರತ ವಿಫಲವಾಯಿತು. ನಾಲ್ಕನೇ ದಿನದ ಅಂತ್ಯಕ್ಕೆ 54 ರನ್‌ಗಳಿಗೆ 4 ವಿಕೆಟ್‌ಗಳನ್ನು ಕಳೆದುಕೊಂಡಿದ್ದ ಭಾರತ, 170 ರನ್‌ಗಳಿಗೆ ಆಲ್‌ಔಟ್ ಆಗುವ ಮೂಲಕ ಇಂಗ್ಲೆಂಡ್ ವಿರುದ್ಧ ಸೋಲು ಅನುಭವಿಸಿತು.

ಈ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ತಂಡವು ಭಾರತವನ್ನು 22 ರನ್‌ಗಳಿಂದ ಸೋಲಿಸಿದೆ. ಸೋಮವಾರ ನಡೆದ ಲಾರ್ಡ್ಸ್ ಟೆಸ್ಟ್‌ನ ಕೊನೆಯ ದಿನದ ಕೊನೆಯ ಸೆಷನ್‌ನಲ್ಲಿ ಭಾರತ ತಂಡವನ್ನು 170 ರನ್‌ಗಳಿಗೆ ಆಲೌಟ್ ಮಾಡಿದ ಇಂಗ್ಲೆಂಡ್ ಈ ರೋಚಕ ಪಂದ್ಯವನ್ನು ಗೆದ್ದುಕೊಂಡಿತು. ಈ ಗೆಲುವಿನೊಂದಿಗೆ, ಇಂಗ್ಲೆಂಡ್ ಭಾರತ ವಿರುದ್ಧದ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 2–1 ಮುನ್ನಡೆ ಸಾಧಿಸಿದೆ. ಇದಕ್ಕೂ ಮೊದಲು, ಬೆನ್ ಸ್ಟೋಕ್ಸ್ ತಂಡವು ಲೀಡ್ ಟೆಸ್ಟ್‌ನಲ್ಲಿ ಭಾರತವನ್ನು ಐದು ವಿಕೆಟ್ ಗಳಿಂದ ಸೋಲಿಸಿದರೆ, ಭಾರತ ತಂಡವು ಎರಡನೇ ಟೆಸ್ಟ್ ಪಂದ್ಯವನ್ನು 336 ರನ್‌ಗಳಿಂದ ಗೆದ್ದುಕೊಂಡಿತು. ಈ ಪಂದ್ಯದಲ್ಲಿ ಟೀಂ




ಇಂಡಿಯಾ ಸೋತರೂ, ತಂಡದ ಗೆಲುವಿಗಾಗಿ ಏಕಾಂಗಿ ಹೋರಾಟ ನಡೆಸಿದ ರವೀಂದ್ರ ಜಡೇಜಾರ ಆಟಕ್ಕೆ ಇಡೀ ವಿಶ್ವ ಕ್ರಿಕೆಟ್ ಸಲಾಂ ಹೊಡೆದಿದೆ.

**ಪಂದ್ಯದ ಸ್ಕೋರ್ ವಿವರಗಳು**

ಇಂಗ್ಲೆಂಡ್ – 387 – 192

ಭಾರತ – 387 & 170

ಭಾರತ ಮತ್ತು ಇಂಗ್ಲೆಂಡ್ ನಡುವಿನ ಟೆಸ್ಟ್ ಸರಣಿಯಲ್ಲಿ 5ನೇ ಟೆಸ್ಟ್ ಪಂದ್ಯವು ಲಂಡನ್ ನಗರದ ಓವಲ್‌ನಲ್ಲಿ ಆಗಸ್ಟ್ 3 ರಂದು ರೋಚಕ ತಿರುವುಗಳೊಂದಿಗೆ ಭಾರತ ಗೆಲುವಿನ ಹಂತ ತಲುಪಿ ಆನಂದೋತ್ಸವದಲ್ಲಿ ಮುಳುಗಿತು. ಭಾರತ ಮತ್ತು ಇಂಗ್ಲೆಂಡ್ ನಡುವಿನ ಈ ಸರಣಿಯಲ್ಲಿ 18 ಶತಕದ ಜೊತೆಯಾಟಗಳು ದಾಖಲಾಗಿದ್ದು ಇದು 21ನೇ ಶತಮಾನದಲ್ಲಿ ಒಂದೇ ಟೆಸ್ಟ್ ಸರಣಿಯಲ್ಲಿ ದಾಖಲಾದ ಅತಿ ಹೆಚ್ಚು ಶತಕದ ಜೊತೆಯಾಟ ಗಳ ದಾಖಲೆಯಾಗಿದೆ. ಈ ಮೊದಲು 2003–04 ರಲ್ಲಿ ಬಾರ್ಡರ್–ಗವಾಸ್ಕರ್ ಟ್ರೋಫಿಯಲ್ಲಿ 17 ಶತಕದ ಜೊತೆಯಾಟಗಳು ನಡೆದಿದ್ದವು. ಈ ಹೊಸ ದಾಖಲೆ ಭಾರತ ಮತ್ತು ಇಂಗ್ಲೆಂಡ್ ನಡುವಿನ ಟೆಸ್ಟ್ ಸರಣಿಯಲ್ಲಿ ಸೃಷ್ಟಿಯಾಗಿದೆ.

**ಪಂದ್ಯದ ಸ್ಕೋರ್ ವಿವರಗಳು**

ಇಂಗ್ಲೆಂಡ್ – 247 & 367

ಭಾರತ – 224 & 396

ಓಲ್ಡ್ ಟ್ರಾಂಫೋರ್ಡ್‌ನಲ್ಲಿ ನಡೆದ ನಾಲ್ಕನೆ ಟೆಸ್ಟ್ ಪಂದ್ಯವು ಮಳೆ ಕಾರಣದಿಂದಾಗಿ ಡ್ರಾದೊಂದಿಗೆ ಮುಕ್ತಾಯವಾಗಿ ಸರಣಿಯ ರೋಚಕತೆಗೆ ಓವಲ್ ಕ್ರೀಡಾಂಗಣಕ್ಕೆ ಅಂತಿಮ ಟೆಸ್ಟ್‌ಗೆ ಕೊಂಡೊಯ್ಯಿತು.

ಆದರೆ ಅನೇಕ ಅನಿರೀಕ್ಷಿತ ಆಟದ ತಿರುವುಗಳ ಪಡೆದ ಅಂತಿಮ ಪಂದ್ಯವು ಭಾರತ ಬೌಲರ್‌ಗಳ ಅತ್ಯದ್ಭುತ ಫಿಂಗ್ ಬೋಲಿಂಗ್‌ನಿಂದಾಗಿ ಇಂಗ್ಲೆಂಡ್ ತಂಡವು 367 ಕ್ಕೆ ಆಲ್‌ಔಟ್ ಆಗುವ ಮೂಲಕ 6 ರನ್‌ಗಳ ಅಂತರದಿಂದ ಸೋಲುಂಡು ವಿಜಯವು ಭಾರತದ ಪರವಾಗಿ ಒಲಿಯಿತು.

ಇದರಿಂದ ತೆಂಡೂಲ್ಕರ್ ಅಂಡರ್‌ಸನ್ ಹೆಸರಿನ ಸರಣಿ ಕಪ್ 2–2 ಸಮ ವಿಜಯ ದೊಂದಿಗೆ ಮುಕ್ತಾಯಗೊಂಡಿತು. ಎರಡೂ ತಂಡಗಳ ಬ್ಯಾಡ್ಸ್‌ಮನ್ ಮತ್ತು ಬೋಲರ್‌ಗಳು ಅತ್ಯದ್ಭುತವಾಗಿ ಆಟವಾಡಿ ವೀಕ್ಷಕರ ಮತ್ತು ಪ್ರೇಕ್ಷಕರ ಕುತೂಹಲಭರಿತವಾಗಿ ಆಡಿ ಮತ್ತು ಮನಮುಟ್ಟುವಂತೆ ಕ್ರಿಕೆಟ್ ರಸದೌತಣವನ್ನು ಉಣಿಸಿದರು.

Editor & Editorial Board, Publisher and Owned by Tulasidevi K S # 555, 17th Cross, SBM Colony, Srinivasanagar, Banashankari, Bengaluru-560050. Printed At : M/s Apoorva Printers & Publishers, 179, Suggata Road, H.M. Halli, Bengaluru-562157, Editor Tulasidevi K S